
# ಬೃಹಚ್ಚರಣ


| ಸಂಪಾದಕ ಸಮಿತಿ | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |

ಸಂಪುಟ : 4 ಸಂಚಿಕೆ : 2 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2014


## 2013–14ರ ಸರ್ವ ಸದಸ್ಯರ ಸಭೆಯ ವಿಶೇಷ ಸಂಚಿಕೆ



### ಅರ್ಪಣೆ

**ಬೃಹಚ್ಚರಣ**

ಈ ಸಂಚಿಕೆಯನ್ನು ನಮ್ಮ ಜನಾಂಗದ ಹಿರಿಯ, ಸಮುದಾಯದ ಪುರೋಭಿವೃದ್ಧಿಗೆ ಶ್ರಮಿಸಿದ

**ವೇ|| ಬ್ರ|| ಸರ್ಜಾಪುರದ ರಾಮೇಶ್ವರಯ್ಯ**

ಅವರಿಗೆ

ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ ನಮಸ್ಕಾರ,

ಮುಂದೆ ಶ್ರಾವಣ ಮಾಸದ ಹಬ್ಬಗಳ ಸಾಲು ಪ್ರಾರಂಭವಾಗುತ್ತದೆ. ಎಲ್ಲ ಸದಸ್ಯರಿಗೂ ಹಾಗೂ ಅವರ ಕುಟುಂಬದವರಿಗೆ ಭಗವಂತನು ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಆಶಿಸುತ್ತೇನೆ.

2013–14ನೇ ಸರ್ವಸದಸ್ಯರ ಸಭೆಯ ವಿವರಗಳನ್ನು ತಮಗೆ ಈ ಸಂಚಿಕೆಯಲ್ಲಿ ನೀಡುತ್ತಿದ್ದೇನೆ. ಸಭೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದು, ಕೆಲವು ತೀರ್ಮಾನಗಳನ್ನು ಸರ್ವಾನುಮತದಿಂದ ತೆಗೆದುಕೊಳ್ಳಲಾಯಿತು.

ಸಂಘದ 'ವಾರ್ಷಿಕ ನಿರ್ವಹಣೆ'ಗಾಗಿ ಕನಿಷ್ಠ 250/– ರೂ.ಗಳನ್ನು ಪ್ರತಿ ಸದಸ್ಯರು ಹಾಗೂ ಪೋಷಕರು ನೀಡಬೇಕೆಂದು ತೀರ್ಮಾನಿಸಲಾಯಿತು. ಸಾವಿರ ರೂಪಾಯಿಗಳನ್ನು ನೀಡಿ ಸದಸ್ಯರಾಗಿರುವವರು ಬಾಕಿ ನಾಲ್ಕು ಸಾವಿರ ರೂ.ಗಳನ್ನು ಒಟ್ಟಿಗೆ ಅಥವಾ ನಾಲ್ಕು ಕಂತುಗಳಲ್ಲಿ ನೀಡಿ ಪೋಷಕರಾಗಬಹುದಾದ ಅವಕಾಶವನ್ನು ಕಲ್ಪಿಸಲಾಗಿದೆ.

**'ವಿದ್ಯಾ ಪ್ರೋತ್ಸಾಹನಿಧಿ'**ಯನ್ನು ಸ್ಥಾಪಿಸಲು ಸಭೆಯು ಬಹುಮತದಿಂದ ಒಪ್ಪಿಗೆ ಕೊಟ್ಟಾಗ, ತಕ್ಷಣವೇ 28 ಸದಸ್ಯರು ದಾನಿಗಳಾಗಿದ್ದಕ್ಕಾಗಿ ಧನ್ಯವಾದಗಳು.

15 ಹಿರಿಯ ಚೇತನರನ್ನು ಸಮುದಾಯದ ಹಿರಿಯರಾದ, ಶ್ರೀ ವೆಂಕಟಗಿರಿಯಪ್ಪ, ಶ್ರೀ ಬಿ.ಎಸ್. ಪದ್ಮನಾಭ್, ಶ್ರೀ ಕೆ.ಆರ್. ಲಕ್ಷ್ಮೀನಾರಾಯಣ ಹಾಗೂ ಶ್ರೀಮತಿ ಶಾರದಾಂಬ ನಾರಾಯಣಸ್ವಾಮಿ ಇವರುಗಳು ಗೌರವಿಸಿದರು. ಇದೇ ಸಂದರ್ಭದಲ್ಲಿ ಮೂವತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸಮುದಾಯದ ಹಿರಿಯ ಉಪನ್ಯಾಸಕರಾದ ಶ್ರೀಯುತರಾದ ಎಸ್. ಶ್ರೀನಿವಾಸಯ್ಯ, ಶ್ರೀದೇವಿ ಬಾಲಸುಬ್ರಹ್ಮಣ್ಯ, ಶ್ರೀಮತಿ ಗಾಯತ್ರಿ ರಾಜಾಪುರ್, ಆರ್.ವಿ. ಪದ್ಮನಾಭ್, ಬಿ.ಎಸ್. ಸೂರ್ಯನಾರಾಯಣ್, ಶ್ರೀ ಶ್ರೀಕಂಠೇಶ್ವರ್‌ರವರು ಪುರಸ್ಕರಿಸಿದರು. ಸಭೆಯ ಕಾರ್ಯನಿರೂಪಣೆಯನ್ನು ಶ್ರೀ ಶಶಿಧರ್‌ರವರು, ವಿದ್ಯಾರ್ಥಿ ಪುರಸ್ಕಾರ ಹಾಗೂ ಹಿರಿಯ ಚೇತನರಿಗೆ ಗೌರವ ಅರ್ಪಣಾ ಕಾರ್ಯಕ್ರಮವನ್ನು ಶ್ರೀ ಬಿ. ಸುಬ್ರಹ್ಮಣ್ಯಂರವರು ನಿರ್ವಹಿಸಿದರು.

ಇವರಿಗೆಲ್ಲಾ ಸಂಘದ ಪರವಾಗಿ ಕೃತಜ್ಞತೆಗಳು.

- ಹಿಂದಿನ ವರ್ಷದಂತೆಯೇ ಸದಸ್ಯರ ಕುಟುಂಬದವರಿಗೆ ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಗಿದೆ.
- ಸಂಘವು ತನ್ನ ಕಚೇರಿಗಾಗಿ ಸ್ವಂತ ಕಟ್ಟಡ ಹೊಂದಲು ಆಲೋಚಿಸುತ್ತಿದೆ.



ತಮ್ಮವ,

■ ಎಸ್. ಸೋಮಸುಂದರ

## ಸಂಪಾದಕೀಯ

ಆತ್ಮೀಯರೆ,

2013–14ರ ಸರ್ವಸದಸ್ಯರ ಸಭೆಯಲ್ಲಿ ಪತ್ರಿಕೆಯ ಬಗ್ಗೆ ತಾವು ನೀಡಿದ ಉತ್ತಮ ಸಲಹೆಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ.

ತಮ್ಮ ಸಲಹೆಗಳನ್ನು ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳಿಗೆ ತಿಳಿಸಿ. ತಮ್ಮ ಸಹಕಾರ ಹೀಗೇ ಮುಂದುವರೆಯಲಿ.

**ಸಂಘಕ್ಕೆ ಸದಸ್ಯರ ಸೇರಿಸಿ,**
**ಬೃಹಚ್ಚರಣ ಬಳಗ ಬೆಳಸಿ**

■ ಕೆ.ಸಿ.ನಟರಾಜನ್
ಸಂಪಾದಕರು

**"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರಾಗಿ, ದಿ|| ಬಿನ್ನಮಂಗಲ ಶ್ರೀನಿವಾಸಮೂರ್ತಿ ಅವರ ಪುತ್ರ, ಬಿ.ಹೆಚ್.ಇ.ಎಲ್. ಸಂಸ್ಥೆಯ ನಿವೃತ್ತ ತಾಂತ್ರಿಕ ಅಧಿಕಾರಿ, ಸಂಘದ ಪೋಷಕ ಸದಸ್ಯ, ಶ್ರೀಯುತ ಬಿ. ಸುಬ್ರಹ್ಮಣ್ಯಂರವರು ಸೇರ್ಪಡೆಯಾಗಿದ್ದಾರೆ.**




**13–7–2014ರಂದು ನಡೆದ 2013–14ರ ಸರ್ವ ಸದಸ್ಯರ ಸಭೆಯಲ್ಲಿ ಕಾರ್ಯದರ್ಶಿ ಶ್ರೀ ವಿ.ಎಸ್.ಮಣಿ ಅವರಿಂದ ಸಂಘದ ವರದಿ ಮಂಡನೆ.**

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 9900113298** |
| ಉಪಾಧ್ಯಕ್ಷರು | : | **ಕೆ.ಬಿ. ಮುರಳಿ, 9448044164** |
| | | **ಕೆ. ಮಂಜುನಾರಾಯಣ್, 9886114279** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 9845055582** |
| ಸಹಕಾರ್ಯದರ್ಶಿ | : | **ವಿ. ಅರುಣ, 9880166001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 9980945699** |
| ಲೆಕ್ಕಪರಿಶೋಧಕರು | : | **ಎಚ್.ಕೆ. ಶಶಿಧರ್, 9845173766** |

ಸದಸ್ಯರು : **ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್, ಬಿ. ಸುಬ್ರಹ್ಮಣ್ಯಂ**

## ‘ವಿದ್ಯಾ ಪ್ರೋತ್ಸಾಹನಿಧಿ’ ದಾನಿಗಳು

*ಶ್ರೀಯುತರು*

| | |
|---|---|
| ವಸಂತಕುಮಾರಿ | ಸೂರಜ್ ಅರುಣ್ |
| ಜಿ.ಕೆ. ನಂದಕಿಶೋರ್ | ಟಿ.ಎನ್. ರವಿಕಿರಣ |
| ಕೆ.ಬಿ. ಮುರಳಿ | ಎಂ.ಪಿ. ರಂಗನಾಥ್ |
| ಶಾರ್ವರಿ ಶ್ರೀನಿವಾಸ್ | ಜಯಶ್ರೀ ಸೋಮಸುಂದರ |
| ಎಸ್. ಸತ್ಯನಾರಾಯಣ | ಆರ್. ಗಣೇಶ್ ಶ್ರೀಧರ್ |
| ರಾಹುಲ್ ಶ್ರೀನಿವಾಸ ಹಾಗೂ | ಆರ್.ಎ. ಈಶ್ವರನ್ |
| ಧಾತ್ರಿ ಪ್ರಸಾದ್ | ಜಿ.ಎಸ್. ವೆಂಕಟೇಶ |
| ಟಿ.ಎಸ್. ರಮೇಶ್ | ಎಂ.ಆರ್. ಜಯರಾಂ |
| ಆರ್.ಎ. ಶ್ರೀನಿವಾಸ್ | ಸುಬ್ರಹ್ಮಣ್ಯಂ ಬೆಂಗಳೂರು |
| ಗೀತಾಮೂರ್ತಿ | ಕನಕಮ್ಮ ಗೋಪಾಲಯ್ಯರ್ |
| ಉಮೇಶ್‌ಕುಮಾರ್,ಸೀತಾಲಕ್ಷ್ಮಿ | ಎಸ್. ಆರ್. ಬಾಲಸುಬ್ರಹ್ಮಣ್ಯ |
| ಕೆ.ಆರ್. ಲಕ್ಷ್ಮೀನಾರಾಯಣ | ಉಮಾ ಗೋವಿಂದ್ |
| ರಘು ಪ್ರಸಾದ್ | ಬಿ.ಎಸ್. ಸೂರ್ಯನಾರಾಯಣ |
| ಅಂಜಲಿ ಚಂದ್ರಶೇಖರ್ | ಜಿ.ಎಸ್. ಸತ್ಯಮೂರ್ತಿ |

### ‘ಅನ್ನ ಸಂತರ್ಪಣಾ ನಿಧಿ’ ದಾನಿಗಳು

| | |
|---|---|
| ನಿರ್ಮಲಾ ಸುಧೀಂದ್ರ | ಕನಕಮ್ಮ ಗೋಪಾಲಅಯ್ಯರ್ |

### ಸಂಘದಿಂದ ಸನ್ಮಾನಿತರಾದ ಹಿರಿಯ ಚೇತನಗಳು

*ಶ್ರೀಯುತರು*

| | |
|---|---|
| ಸತ್ಯನಾರಾಯಣ ಬಿ.ಎಲ್. | ರಾಜೇಶ್ವರಿ ಕೆ. |
| ವೆಂಕಟೇಶ್ ಜಿ.ಎಸ್. | ನಾಗರತ್ನ |
| ಶ್ರೀನಿವಾಸಮೂರ್ತಿ ವಿ. | ಶಾಂತ ಸುಬ್ರಹ್ಮಣ್ಯಂ |
| ಶೇಷಾಚಲ ಬಿ. | ಪದ್ಮಾವತಮ್ಮ ಟಿ.ಪಿ. |
| ಸೂರ್ಯನಾರಾಯಣ ಎಂ.ಆರ್. | ಭ್ರಮರ ಗೋಪಿನಾಥ |
| ರಾಜಣ್ಣ ಕೆ. | ಪಾರ್ವತಿ ಅಶ್ವತ್‌ನಾರಾಯಣ |
| ರಾಮಮೂರ್ತಿ ಕೆ. | ವಸಂತ ರಂಗನಾಥನ್ |
| ಜಯರಾಂ ಎಂ.ಆರ್. | ರಂಗನಾಥನ್ ಎಂ.ಪಿ. |

## 2013–14 ಸರ್ವ ಸದಸ್ಯರ ಸಭೆ

ನಮ್ಮ ಬೃಹಚ್ಚರಣ ಸಂಘದ ವಾರ್ಷಿಕ ಸಭೆಯು ದಿನಾಂಕ: 13–7–2014 ಭಾನುವಾರ, ಬಸವನಗುಡಿಯ ಶ್ರೀ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ಮಠದ ಸಭಾಂಗಣದಲ್ಲಿ ನೆರವೇರಿತು. ಬೆಳಿಗ್ಗೆ 10.30ಕ್ಕೆ ಶ್ರೀಮತಿ ವಸುಮತಿ ರವಿಕುಮಾರ್‌ರವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಗಿ, ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ಸಂಘದ ಕಾರ್ಯಚಟುವಟಿಕೆಗಳ ಪ್ರಾಸ್ತಾವಿಕ ನುಡಿಯೊಂದಿಗೆ ಸಂಘದ ಮುಂದಿನ ಯೋಜನೆಗಳಾದ ‘ವಿದ್ಯಾ ಪ್ರೋತ್ಸಾಹ ನಿಧಿ’ ಸ್ಥಾಪನೆ, ತೀರ್ಥ ಕ್ಷೇತ್ರಗಳಿಗೆ ಪ್ರವಾಸ, ಸ್ವಂತ ಕಚೇರಿ ಕಟ್ಟಡದ ಬಗ್ಗೆ ಸಭೆಯ ಸಲಹೆ ಹಾಗೂ ಸಂಘದ ವಾರ್ಷಿಕ ವೆಚ್ಚ ನಿರ್ವಹಣಾ ನಿದಿಗಾಗಿ ಸದಸ್ಯರ ಸಹಕಾರವನ್ನು ಕೋರಿದರು.

ಸಂಘದ ಖಜಾಂಚಿ ಶ್ರೀ ಎಸ್. ಸತ್ಯನಾರಾಯಣ ಅವರು 2013–14ರ ಆಯವ್ಯಯದ ಲೆಕ್ಕಪತ್ರ ಮಂಡಿಸಿ, ಸಭೆಯ ಅನುಮೋದನೆ, ಅಂಗೀಕಾರಕ್ಕೆ ಕೋರಿಕೆ ಸಲ್ಲಿಸಿದರು.

ಸಭೆಯಲ್ಲಿ ಸಂಘದ ಹಿರಿಯ ಸದಸ್ಯರಾದ ಶ್ರೀಯುತ ವೆಂಕಟೇಶಮೂರ್ತಿ, ಜಿ.ಎಸ್.ಸತ್ಯಮೂರ್ತಿ, ಎನ್.ವಿ. ಸುಂದರ್, ಎನ್.ವಿ. ಗೋಪಾಲಯ್ಯ ಬಿ.ಎನ್.ಜಿ. ಪ್ರಸಾದ್‌ರವರು ತಮ್ಮ ಅನಿಸಿಕೆಗಳನ್ನು ಮಂಡಿಸಿದ ನಂತರ ಸರ್ವಸದಸ್ಯರ ಸಭೆಯು 2013–14ರ ಆಯವ್ಯಯ ಲೆಕ್ಕ ಪತ್ರಕ್ಕೆ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಸೋಮಸುಂದರ ಅವರು ಮಾತನಾಡುತ್ತ, “ಪ್ರತಿಯೊಬ್ಬರ ಸಲಹೆ, ಸೂಚನೆಗಳನ್ನು ಗಮನದಲ್ಲಿ ಇರಿಸಿಕೊಳ್ಳಲಾಗಿದೆ” ಎಂದು ತಿಳಿಸಿದರು. ಸಂಘದ ನಿರ್ವಹಣೆಗಾಗಿ ವಾರ್ಷಿಕ ಕನಿಷ್ಠ 250/– ರೂ.ಗಳನ್ನು ಕೊಡಲು ಒಪ್ಪಿದ್ದಕ್ಕಾಗಿ ಸದಸ್ಯರನ್ನು ಅಭಿನಂದಿಸಿದರು.

“ವಿದ್ಯಾ ಪ್ರೋತ್ಸಾಹನಿಧಿಗಾಗಿ” ಸಭೆಯಲ್ಲಿಯೇ 28ಕ್ಕೂ ಹೆಚ್ಚು ಸದಸ್ಯರು ದಾನಿಗಳಾಗಿದ್ದು, ಅವರಿಗೆ ಸಂಘವು ಅಭಾರಿ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಲೆಕ್ಕ ಪತ್ರ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಕುಮಾರ್ ಅವರು ಸಂಘಕ್ಕೆ ಸಲ್ಲಿಸಿದ ಸೇವೆಗಾಗಿ ನೆನಪಿನ ಕಾಣಿಕೆಯೊಂದಿಗೆ ಸನ್ಮಾನಿಸಲಾಯಿತು.

ಶ್ರೀ ಶಶಿಧರ್‌ರವರಿಂದ ಕಾರ್ಯಕ್ರಮ ನಿರೂಪಣೆ, ಶ್ರೀ ನಾಗೇಶ್‌ರವರಿಂದ, ‘ಬೃಹಚ್ಚರಣ,’ ವಾರ್ತಾ ಪತ್ರಿಕೆಯ ಪಕ್ಷಿನೋಟ, ಶ್ರೀ ಅರುಣ್‌ರವರಿಂದ ನಮ್ಮನ್ನಗಲಿದ ನಮ್ಮವರಿಗೆ ಶ್ರದ್ಧಾಂಜಲಿ, ಶ್ರೀಮತಿ ಸರಸ್ವತಿ ನಟರಾಜ್‌ರವರಿಂದ ವಂದನಾರ್ಪಣೆ ನೇರವೇರಿತು.

–ಸಂ.

### ಅಭಿನಂದನೆ

**ಶ್ರೀಮತಿ ವಸಂತ ಕುಮಾರಿ ಆರ್.ಜಿ.ರವರು ವಿದ್ಯಾ ಪ್ರೋತ್ಸಾಹ ನಿಧಿಗಾಗಿ 25,000/– ರೂ.ಗಳನ್ನು ನೀಡಿರುತ್ತಾರೆ. ಹಾಗೂ ಶ್ರೀ ರಘುಪ್ರಸಾದ್ ಅವರು ಅನ್ನಸಂತರ್ಪಣಾ ಮತ್ತು ವಿದ್ಯಾ ಪ್ರೋತ್ಸಾಹ ನಿಧಿಗಾಗಿ 10,000/– ರೂ.ಗಳನ್ನು ನೀಡಿರುವುದಕ್ಕೆ ಶ್ರೀಯುತರನ್ನು ಸಂಘ ಅಭಿನಂದಿಸುತ್ತದೆ.**

## ಸಂಘದ 2013–14ರ ಸರ್ವಸದಸ್ಯರ ಸಭೆಯ ಚಿತ್ರಗಳು









## ಸನ್ಮಾನಿತ ಹಿರಿಯ ಚೇತನರು





ಛಾಯಾಚಿತ್ರ : ನಟರಾಜ್ – ಶಿವಕುಮಾರ್





# ಬೃಹಚ್ಚರಣದ ಗಳಸ್ಯ–ಕಂಠಸ್ಯರು : ಆಸು; ಕೀಸು; ಕೋಸು

ಬಹು ಆತ್ಮೀಯರಿಗೆ ಈ ಹೆಸರುಗಳು ಅನ್ವರ್ಥ. ಬೃಹತ್‌ಚ್ಚರಣದ ಸಮುದಾಯದಲ್ಲಿ 1850ರಿಂದ 1900ರಲ್ಲಿ ತಮ್ಮ ಸಾರ್ಥಕ ಬದುಕನು ನಡೆಸಿದ ಮರೆಯಲಾಗದಂತಹ ಜೀವನ ಪಥ.

ಸೇಹಕ್ಕೆ ಇನ್ನೊಂದು ಹೆಸರು ಈ ಮೂವರ ಗೆಳತನ. ಸ್ನೇಹದ ಕಡಲಲ್ಲಿ ಪಯಣಿಗರಾಗಿ ಜೀವನ ಪಥವನ್ನು ಸಾಗಿಸಿದರು. ಆತ್ಮಗಳಿಗೆ ಹತ್ತಿರವಾದವರಿಗೆ ಆತ್ಮೀಯರೆನ್ನುವುದು ಸಹಜ. ಆಂಗ್ಲಭಾಷೆಯ ಪ್ರಖ್ಯಾತ ನಾಟಕಕಾರ ಸರ್. ವಿಲಿಯಂ ಷೇಕ್ಸ್‌ಪಿಯರ್‌ನ ನುಡಿಯಲ್ಲಿ “Everyone Flatters thee is no friend in misery” ಎಂಬ ಮಾತಿದೆ. ಹೊಗಳುವವರೆಲ್ಲಾ ಗೆಳೆಯರಲ್ಲ. ಮನುಷ್ಯನ ಆಪತ್ತಿನ ಸಮಯದಲ್ಲಿ ಮನ ತುಡಿದು ಸ್ಪಂದಿಸುವವರೇ ನಿಜವಾದ ಗಳಸ್ಯ–ಕಂಠಸ್ಥರು.

ಆಸು; ಕೀಸು; ಕೋಸು ಅಂದರೆ ಆವಡದೇನಹಳ್ಳಿ ಸುಬ್ಬಣ್ಣ, ಕಿತ್ತಿಗಾನಹಳ್ಳಿ ಸುಬ್ಬಣ್ಣ, ಕೊತ್ತಿಕೊಂಡಹಳ್ಳಿ ಸುಬ್ಬಣ್ಣ. ಇವರು ವಾಸಿಸುತ್ತಿದ್ದ ಆವಡದೇನಹಳ್ಳಿ ಆನೆಕಲ್ ಮತ್ತು ಚಂದಾಪುರದಾರಿಯಲ್ಲಿ ಆನೇಕಲ್‌ನಿಂದ ಸುಮಾರು ಎರಡು ಮೈಲಿ ಬೆಂಗಳೂರು–ಚಂದಾಪುರದ ರಸ್ತೆಯಲ್ಲಿ ಸರ್ವಮಾನ್ಯ ಕಿತ್ತಿಗಾನಹಳ್ಳಿ ಇದ್ದರೆ. ಕೊತ್ತಕೊಂಡಪಲ್ಲಿಯು ಹೊಸೂರಿಗೆ ಸೇರಿದಂತೆ (ಇಂದಿನ ಟಿವಿಎಸ್ ಸಂಸ್ಥೆ ಇರುವ ಜಾಗ) ಇದು ಇವರ ಗ್ರಾಮಗಳ ಭೂಗೋಳಿಕ ತ್ರಿಭುಜ. ಇಲ್ಲಿ ಇವರ ಸ್ನೇಹ ಸಂಪರ್ಕ.

ಆವಡದೇನಹಳ್ಳಿಯಲ್ಲಿದ್ದ ಸುಬ್ಬಣ್ಣನವರು ಸಾಕಷ್ಟು ಜಮೀನು ಹೊಂದಿ, ಜೊತೆಗೆ ವಂಶ ಪಾರಂಪರೆಯಾಗಿ ಬಂದ ಗ್ರಾಮಾಧಿಕಾರಿ ಶಾನುಭೋಕೆ ಇತ್ತು. ಕಿತ್ತಗಾನಹಳ್ಳಿ ಸುಬ್ಬಣ್ಣನವರು ಮೂಲತಃ ಆಡೇಸೊನಹಟ್ಟಿಯವರಾಗಿ ಶ್ರೀಯುತ ವೆಂಕಟರಾಯಪ್ಪನವರ ಪುತ್ರರು. ಗುಡ್ನಳ್ಳಿ ಗುಂಡಪ್ಪರವರ ಪುತ್ರಿ ರಾಮಕ್ಕರವರನ್ನು ಮದುವೆಯಾಗಿ, ಕಿತ್ತಿಗಾನಹಳ್ಳಿಯಲ್ಲಿ ಮನೆವಾಳ್ತನ ಪಡೆದು ಕಿತ್ತಿಗಾನ ಹಳ್ಳಿಯಲ್ಲಿ ಶ್ಯಾನುಭೋಗರು. ಕೋಸುರವರು ಮೂಲತಃ ಗುಂಜೂರಿನ ಶೀನಪ್ಪರವರ ಮಕ್ಕಳು. ಹಿಂದಿನಿಂದಲೂ ಬಂದಿದ್ದ ಹೊಸೂರಿನ ಗ್ರಾಮಗಳಾದ ಕೊತ್ತಕೊಂಡಪಲ್ಲಿ ಮತ್ತು ಬೊಮ್ಮಂಡ ಹಳ್ಳಿಗಳ ಶಾನುಭೋಗಿಕೆ ಅಲ್ಲಿ ಅದನ್ನು ಕರಣಂ ಎಂದು ಕರೆಯುತ್ತಿದ್ದರು. ಅಂದರೆ ಅವರೂ ಸಹ ಗ್ರಾಮದ ಅಧಿಕಾರಿಯಾಗಿದ್ದರು. ಈ ತ್ರಿಭುಜಾಕಾರದ ಸುತ್ತಳತೆಯಲ್ಲಿ ಇವರ ಸ್ನೇಹದ ಬೆಸುಗೆ.

ಇವರು ಮಾತಿಗೆ ಸೇರುತ್ತಿದ್ದುದು ಕಂದಾಯಗಳನ್ನು ಅವರವರ ಹಳ್ಳಿಯಲ್ಲಿ ವಸೂಲು ಮಾಡಿ ಸರ್ಕಾರಕ್ಕೆ ಸಲ್ಲಿಸಲು ಸೇರುತ್ತಿದ್ದ ಜಮಾಂಬಂದಿ ಸಮಯದಲ್ಲಿ ಈ ಜಮಾಬಂದಿಗಳು ನಿರ್ದಿಷ್ಟ ಸಮಯದಲ್ಲಿ ತಾಲೂಕಿನ ರೆವೆನ್ಯೂ ಅಧಿಕಾರಿಗಳಾದ ಅಮಲ್ದಾರರು, ಡೆಪ್ಯೂಟಿ ಕಮಿಷನರ್. ಮುಂತಾದ ಜಿಲ್ಲೆಯ ಅಧಿಕಾರಿಗಳ ನೇತೃತ್ವದಲ್ಲಿ ನಡೆಯುತ್ತಿದ್ದವು. ಹಳ್ಳಿಯ ಪಟೇಲರು ಮತ್ತು ಶಾನುಭೋಗರಿಗೆ ದೊಡ್ಡ ಪರೀಕ್ಷೆಗಳನ್ನು ಎದುರಿಸಿ ಬಂದ ಹಾಗೆ ಇರುತ್ತಿತ್ತು. ಸುಮಾರು ಎರಡು ತಿಂಗಳ ಸಿದ್ಧತೆ. ಹಳ್ಳಿಯ ಚಾವಡಿಯಲ್ಲಿ ಕುಳಿತು ರೈತರನ್ನು ಕರೆಸಿ. ಕಂದಾಯ ವಸೂಲು ಮಾಡುವಾಗ ಅವರು ನೀಡುತ್ತಿದ್ದ ಸಬೂಬು ಉತ್ತರಗಳಿಗೆ ಸಮಜಾಯಿಷಿ ನೀಡಲು ಕಲಿತ ಬುದ್ಧಿಯನ್ನೆಲ್ಲಾ ಪ್ರಯೋಗಿಸಲಾಗುತ್ತಿತ್ತು. ಈ ರೀತಿ ವಸೂಲು ಮಾಡಿದ ಹಣವನ್ನು ಜಮಾಬಂದಿಯ ಸಮಯದಲ್ಲಿ ಸರ್ಕಾರಕ್ಕೆ ಇರಿಸಾಲು ಮಾಡುವುದು ಶಾನುಭೋಗರಿಗೆ ಪ್ರಯಾಸದ ಕೆಲಸವೇ ಸರಿ. ಅಲ್ಲಿ ಸೇರಿದ ಶ್ಯಾನುಭೋಗರಿಗೆಲ್ಲರಿಗೂ ಅವರ ಕಡತಗಳಲ್ಲಿದ್ದು ಖಾನೇಷುಮಾರಿ, ಖರ್ದಿ, ಪಹಣಿ, ಪಟ್ಟಿ ಮುಂತಾದವುಗಳ ಬಗಗೆ ಮಾತುಕತೆಗಳು ಇರಿಸಾಲು ಮುಗಿದ ನಂತರ ಹೆಗಲಮೇಲಿದ್ದ ದೊಡ್ಡ ಜವಾಬ್ದಾರಿ ಕಳೆದ ಹಾಗೆ ಭಾಸವಾಗುತ್ತಿತ್ತು. ಈ ಸಮಯದಲ್ಲಿ ನಮ್ಮ ಆಸು, ಕೀಸು, ಕೋಸುಗಳ ಗೆಳತನದ ಬಿಮ್ಮಿನಲ್ಲಿ ಹಲವಾರು ಚಿಂತನೆಗಳು, ಹರಟೆಯ ಮಾತುಗಳು ಸಂಸಾರದ ಸರಿಗಮ, ಕುಚೋದ್ಯ, ಮಕ್ಕಳ ಅಭಿವೃದ್ಧಿ ಮೊದಲಾದ ಹಲವು ವಿಷಯಗಳು ಚರ್ಚಿಸಲ್ಪಡುತ್ತಿತ್ತು.

ಹಾಗೆಯೇ ಈ ಮೂವರು ಆಜುಬಾಜಿನಲ್ಲಿ ನಡೆಯುತ್ತಿದ್ದ ಸಂತೆ, ಜಾತ್ರೆ, ದೇಗುಲದಲ್ಲಿ ನಡೆಯುವ ಹೋಮ, ಸಮಾರಾಧನೆ, ಮುಂಜಿ, ಮದುವೆ, ನಾಮಕರಣಗಳಲ್ಲಿ ಸೇರಿ ಹಲವಾರು ಚಿಂತನೆ, ಹರಟೆಗಳೊಂದಿಗೆ ಗೆಳೆಯರ ಮನಸ್ಸು ಏಕೀಕೃತವಾಗಿರುತ್ತಿತ್ತು.

ಆ ಕಾಲದಲ್ಲಿ ಕಾಶಿಗೆ ಹೋಗಿ ಬರುವುದೆಂದರೆ ಅತಿ ಪ್ರಯಾಸದ ಕಾರ್ಯ. “ಸ್ಮರಣೆಯೊಂದೆ ಸಾಲದೆ ಕಾಶಿಯ ವಿಶ್ವನಾಥನಿಗೆ” ಎಂದು ಹಲವಾರು ಜನ ಅಷ್ಟಕ್ಕೆ ತೃಪ್ತಿಪಡುತ್ತಿದ್ದರು. ಆದರೆ ಈ ಗೆಳೆಯತ್ರಯರು, ಬೃಹಚ್ಚರಣದ ಸಮುದಾಯದಲ್ಲಿ ಮೊದಲಿಗೆ ಕಾಶಿಯಾತ್ರೆಯನ್ನು ಮಾಡಿಬಂದರು ಇದ್ದ ಅಲ್ಪವಾಹನ ಸೌಕರ್ಯವನ್ನು ಉಪಯೋಗಿಸಿ. ನಡೆದು, ಕೆಲವು ಕಡೆ ರೈಲು, ಬಸ್ಸುಗಳಲ್ಲಿ ಪಯಣಿಸಿ ಯಶಸ್ವಿ ಕಾಶಿಯ ಗಂಗಾಸ್ನಾನ, ವಿಶ್ವನಾಥನ ದರ್ಶನಯೋಗ ಪಡೆದುದು ಇವರ ಜೀವನದಲ್ಲಿ ಮೈಲುಗಲ್ಲು. ಇದೊಂದು ಹಚ್ಚುಗಾರಿಕೆ ಎನಿಸಿ ಸರ್ವರಿಂದಲೂ ಪ್ರಶಂಸೆಗೆ ಒಳಗಾದ ಸ್ನೇಹಿತರು ಆಸು, ಕೀಸು, ಕೋಸು.

ಇವರ ಸರ್ಕಾರಿ ಕಡತಗಳ ಜೊತೆಯಲ್ಲಿ ಸಮಾಜಸೇವೆಯ ಕೆಲಸವು ಜರುಗುತ್ತಿತ್ತು. ವಧುವರ ಜಾತಕಗಳೊಂದಿಗೆ ಹಲವಾರು ಊರುಗಳನ್ನು ಸುತ್ತಿ “ಹೆಣ್ಣಿಗೊಂದು ಗಂಡನ್ನು” ಹೊಂದಿಸಿಕೊಡುವ ಮಹತ್ತರ ಕಾರ್ಯ ಇವರದು. ಈ ನಿಟ್ಟಿನಲ್ಲಿ ಇವರದು ಅನುಪಮ ಸೇವೆ. ಹಾಗೂ ರೋಗ ರುಜಿನ ಕಾಲದಲ್ಲಿ ತಮ್ಮ ಸೇವೆಯನ್ನು ರೋಗಿಗಳಿಗೆ ಸಲ್ಲಿಸುತ್ತಿದ್ದರು. ಅವರುಗಳ ನೋವಿಗೆ ಇವರು ಸ್ಪಂದಿಸುತ್ತಿದ್ದರು. ಬೃಹತ್‌ಚರಣದಲ್ಲಿ ಅಂದರೆ ಪೆರಿಚರಣದಲ್ಲಿ ಪ್ರಾತಃಸ್ಮರಣೀಯರು. ಇವರುಗಳ ಸ್ನೇಹಕ್ಕೆ ಬಾಳಿಗೆ, ಮನಸಿಗೆ ಎಲ್ಲರೂ ಸೋತಿದ್ದರು.

ಸದರಿ ಸ್ನೇಹಿತರ ಅಂದರೆ ಆಸು, ಕೀಸು, ಕೋಸುರವರ ನೆನಪು, ಗೆಳೆಯದರ್ಶನದಲ್ಲಿ ಇಂದಿನ ಸಮುದಾಯದ ಜನರಿಗೆ ಒಂದು ಮಾದರಿಯಾಗಲಿ ಎಂಬುದು ಈ ಬರಹದ ಉದ್ದೇಶ. ಹಾಗೆಯೇ “ಸರ್ವೇ ಜನ ಸುಖಿನೋ ಭವಂತು”.



■ ಜಿ.ಎಸ್ ಸತ್ಯಮೂರ್ತಿ
9844469581

## ಮನವಿ

**ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಘದ ಕಾರ್ಯ ನಿರ್ವಹಣಾ ವಾರ್ಷಿಕ ವೆಚ್ಚಕ್ಕಾಗಿ, ಪ್ರತಿ ಸದಸ್ಯರೂ, ಪೋಷಕರು ಕನಿಷ್ಟ 250/– ರೂ.ಗಳನ್ನು ನೀಡಬೇಕೆಂದು ಸದಸ್ಯರಲ್ಲಿ ಸಂಘ ಮನವಿ ಮಾಡುತ್ತದೆ.**

# ಸಂಘದಿಂದ 2013–14ರ ಪ್ರತಿಭಾ ಪುರಸ್ಕೃತ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳು

















ಪಂಕ್ತಿ ಭೋಜನ

ಛಾಯಾಚಿತ್ರ : ನಟರಾಜ್ – ಶಿವಕುಮಾರ್



# ಮಂಕುತಿಮ್ಮನ ಕಗ್ಗದ ತಾತ್ಪರ್ಯ

■ ಶ್ರೀಮತಿ ಜೆ.ಪಿ. ಲಕ್ಷ್ಮೀದೇವಿ

**"ಶ್ರೀ ವಿಷ್ಣು ವಿಶ್ವಾದಿಮೂಲ ಮಾಯಾಲೋಲ**
**ದೇವ ಸರ್ವೇಶ ಪರ ಬೊಮ್ಮನೆಂದು ಜನಂ**
**ಆವುದನು ಕಾಣದೊಡಮಳ್ತಿಯಂ ನಂಬಿಹುದೋ**
**ಆ ವಿಚಿತ್ರಕೆ ನಮಿಸೋ ಮಂಕುತಿಮ್ಮ"**

ಶ್ರೀ ವಿಷ್ಣು ಸಹಸ್ರನಾಮದ ಮೊದಲೆರಡು ಪದಗಳನ್ನು ನಾವಿಲ್ಲಿ ಕಾಣಬಹುದು. "ವಿಶ್ವಂ ವಿಷ್ಣು." ವಿಶ್ವವನ್ನೆಲ್ಲಾ ವ್ಯಾಪಿಸಿರುವ ವಿಷ್ಣು. ವಿಷ್ಣುವೆಂದರೆ ಎಲ್ಲ ಕಡೆಯೂ ಇರುವುದು, ವ್ಯಾಪಿಸಿರುವುದು.

'ಅಣುರೇಣು ತೃಣಕಾಷ್ಟ ಪರಿಪೂರ್ಣ ಗೋವಿಂದ.' ಅವನೇ ಆದಿನಾರಾಯಣ. ಸ್ವಯಂಭೂವಾದ ಶ್ರೀ ನಾರಾಯಣ ತಾನೇ ತಾನಾಗಿ ಆವಿರ್ಭವಿಸಿ ನಂತರ ಸೃಷ್ಟಿಯನ್ನು ಮಾಡಿದ ಆದುದರಿಂದ ಆದಿಮೂಲ. ಏಕಾಂಗಿಯಾಗಿಹೆನು... ಬೇಸರವಹುದು ಎಂದು ಜಗತ್ತನ್ನು ಸೃಷ್ಟಿ ಮಾಡಿ ಅದರೊಳಗೆ ಮಾಯೆಯನ್ನು ಪ್ರವೇಶ ಮಾಡುವಂತೆ ಮಾಡಿದನು.

ಜಗತ್ತಿನಲ್ಲಿ ಬೊಂಬೆಯನ್ನು ಸೃಷ್ಟಿಮಾಡಿ ಆಟವಾಡುವಂತೆ ಮಾಡಿ ಅದನ್ನು ನೋಡಿ ಸಂತೋಷಪಡುವನು. ಸರ್ವರಿಗೂ ಒಡೆಯನಾದ ಅವನೇ ದೇವ. ಅವನೇ ಪರಬ್ರಹ್ಮ. ಕ್ರೀಡೆ, ವಿಜಿಗೀಷಾ, ವ್ಯವಹಾರ, ದ್ಯುತಿ ಸ್ತುತಿಗತಿ ಮೊದಲಾದ ಗುಣಗಳನ್ನು ಹೊಂದಿರುವವನು ದೇವ.

ಕ್ರೀಡೆ : ಸೃಷ್ಟ್ಯಾದಿಗಳನ್ನು ಮಾಡುತ್ತಾ ಕ್ರೀಡಿಸುತ್ತಾನೆ... ಆಟವಾಡಿಸುತ್ತಾನೆ. (2) ದುಷ್ಟರನ್ನು ಜಯಿಸುವುದು ವಿಜಿಗೇಷಾ. (3) ಜೀವರೂಪದಿಂದ ವ್ಯವಹರಿಸುತ್ತಾನೆ (4) ಚೈತನ್ಯರೂಪದಿಂದ ಬೆಳಗುತ್ತಾನೆ (5) ಬ್ರಹ್ಮಾದಿಗಳಿಂದ ಸ್ತುತಿಸಲ್ಪಡುತ್ತಾನೆ (6) ಎಲ್ಲವನ್ನೂ ವ್ಯಾಪಿಸುತ್ತಾನೆ. ಆದುದರಿಂದ ದೇವದೇವನಾಗುತ್ತಾನೆ.

ಜಗತ್ತಿನ ಸೃಷ್ಟಿಯಾದ ಗಿಡ, ಬೆಟ್ಟ, ಮರ, ಸಮುದ್ರ ಮುಂತಾದವುಗಳನ್ನು ನೋಡಿ ಆಶ್ಚರ್ಯದಿಂದ ಅವನನ್ನೇ ಪರಬ್ರಹ್ಮನೆಂದು ಕರೆದರು. ಸೃಷ್ಟಿ ಮಾಡಿದ ಭಗವಂತನನ್ನು ಕಾಣದಿದ್ದರೂ ಅಗಾಧವಾದ ಪ್ರಕೃತಿ ವಿಚಿತ್ರಕ್ಕೆ ತಲೆ ಬಾಗುವಂತಹ ದಿವ್ಯಶಕ್ತಿಯನ್ನು ನೋಡಿ ಓಹೋ! ಇದೇ ಪರಬ್ರಹ್ಮ ಎಂದು ತಿಳಿದರು. ಅವನನ್ನೇ ನಂಬಿದರು. ಎಲ್ಲೆ ಮನುಜನೇ ಇಂತಹ ವಿಚಿತ್ರವಾದ ಗೂಢವಾದ ಗಹನವಾದ ಬಹಿರಂಗದಲ್ಲಿ ಕಂಡು ಅಂತರಂಗದಲ್ಲಿ ಜ್ಯೋತಿಯನ್ನು ಬೆಳಗುವ ಈಶಕ್ತಿ, ಈ ಬಲ, ಈ ತೇಜಸ್ಸು ಇವುಗಳಿಗೆ ನಮಸ್ಕಾರ ಮಾಡು ಎಂದು ತಿಮ್ಮ ಗುರು ಹೇಳಿದ್ದಾರೆ.

**ಎಲ್ಲರೂ ಎಲ್ಲಿ ತಲೆ ಬಾಗುತ್ತಾರೋ... ಅದೇ ಪ್ರಣವ– ಓಂಕಾರ**
**ಎಲ್ಲರೂ ಎಲ್ಲಿ ತಲೆ ಬಾಗುತ್ತೇವೋ... ಅದೇ ಪರಮೇಶ್ವರ**
ಎಲ್ಲರಿಂದಲೂ ನಮಸ್ಕಾರ ಪಡೆಯುವಂಥ ಯೋಗ್ಯತೆ ಪರಮೇಶ್ವರನಿಗೆ.

ಮಾಯೆ ಎಂದರೆ ಏನು? ವಿಷ್ಣು ಕೃಷ್ಣವರ್ಣ. ಅವನು ಮಲಗಿರುವುದು ಕ್ಷೀರ ಸಮುದ್ರದಲ್ಲಿ. ಯೋಗ ನಿದ್ರೆಯಲ್ಲಿದ್ದರೂ ರಜೋಗುಣವನ್ನು ಅವಲಂಬಿಸಿ ವಿಶ್ವವನ್ನು ಪಾಲನೆ ಮಾಡುವ ಕಾರ್ಯ. ಒಂದಕ್ಕೊಂದು ವಿರೋಧಾಭಾಸ ವಾಗಿದೆ. ಇದನ್ನೇ ಮಾಯೆ ಎನ್ನುವುದು. ಪ್ರಪಂಚವನ್ನೆಲ್ಲಾ ಇದೇ ಮಾಯೆ ಆವರಿಸಿದೆ. ಈ ಮಾಯೆಯನ್ನೇ ನೋಡಿ ಲೋಲುಪ್ತಿ... ಆನಂದ ಪಡುತ್ತಿದ್ದಾನೆ. ❐

## ಯುವ ಕಲಾವಿದೆ

# ಶ್ರೀಮತಿ ರಶ್ಮಿ ಅನಂತ್



ಬೃಹಚ್ಚರಣ ಸಮುದಾಯದಲ್ಲಿ ಸಂಗೀತ–ಸಾಹಿತ್ಯ–ಕಲೆ–ಕಲಾವಿದರಿಗೆ ಕೊರತೆ ಇಲ್ಲ. ಪ್ರತಿಭೆ ಇದ್ದರೂ ಪ್ರಚಾರ ಪ್ರಿಯರಲ್ಲ. ಅಂತಹವರಲ್ಲಿ ಪದವೀಧರೆ ಶ್ರೀಮತಿ ರಶ್ಮಿ ಅನಂತ್ ಒಬ್ಬರು. ಭರತನಾಟ್ಯ ಕಲೆಯಲ್ಲಿ ಹಂತಹಂತವಾಗಿ ಮೇಲಕ್ಕೆರುತ್ತಿರುವ ಯುವ ನೃತ್ಯಕಲಾವಿದೆ ಎಂಬ ಹೆಮ್ಮೆ ನಮ್ಮದು.

ರಾಜ್ಯದ ಹೆಸರಾಂತ "ಭ್ರಮರ ನೃತ್ಯಶಾಲಾ" ವ್ಯವಸ್ಥಾಪಕಿ, ವಿದೂಷಿ ಶ್ರೀಮತಿ ವಿಂದ್ಯ ಶ್ರೀನಾಥ್‌ರಲ್ಲಿ ಸಣ್ಣ ವಯಸ್ಸಿನಿಂದಲೇ ನೃತ್ಯ ಕಲಿಕೆ ಪ್ರಾರಂಭಿಸಿ ಸುಮಾರು 22 ವರ್ಷಗಳಿಂದ ಅಭ್ಯಾಸ ಮಾಡಿ, ಆರ್ಯಭಟ ಪ್ರಶಸ್ತಿ ಸೇರಿದಂತೆ ಇತರ ಸಂಘಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ.

ಹತ್ತು ವರ್ಷಗಳಿಂದ ಮಕ್ಕಳಿಗೆ ನೃತ್ಯ ಕಲಿಸುತ್ತಿರುವ ಶ್ರೀಮತಿ ರಶ್ಮಿ ಪ್ರಸ್ತುತ ರಾಜರಾಜೇಶ್ವರಿ ನಗರದಲ್ಲಿ, "ನಿತ್ಯಶ್ರೀ ನಾಟ್ಯಶಾಲಾ" ಸ್ಥಾಪಿಸಿ ಸುಮಾರು 25ಕ್ಕೂ ಹೆಚ್ಚು ಮಕ್ಕಳಿಗೆ ಭರತನಾಟ್ಯ ಕಲಿಸುತ್ತಿರುವುದಲ್ಲದೆ, "ಜನನಾಕ್ಷಿ ವಿದ್ಯಾನಿಕೇತನ"ದಲ್ಲೂ ನಾಲ್ಕು ವರ್ಷಗಳಿಂದ ನೃತ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮೀಣ ನೃತ್ಯ ಕಲೆಗಳಾದ ಕಂಸಾಳೆ ಪದ, ಡೊಳ್ಳು ಕುಣಿತ, ಪಟ್ಟದ ಕುಣಿತ, ಪೂಜಾ ಕುಣಿತ, ಭಾಂಗ್ರ, ಗರ್ಭ, ಲಾವಣಿ, ದಾಂಡಿಯ ನೃತ್ಯಗಳಲ್ಲೂ ಪರಿಶ್ರಮವಿರುವುದು ಸಂತಸ. ಕರ್ನಾಟಕ ಸರ್ಕಾರದ ವತಿಯಿಂದ ಮುಂಬಯಿ, ಭೂಪಾಲ್, ಊಟಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರತಿನಿಧಿಸಿದ್ದಾರೆ. ಹಂಪೆ ಕದಂಬ ಉತ್ಸವ, ಜಾನಪದ ಜಾತ್ರೆ, ಈ ಟಿವಿಯ ಪರಿಪೂರ್ಣ ಮಹಿಳೆ, ರಾಜ್ಯೋತ್ಸವ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಏಕಾಂಗಿ ಯಾಗಿ ಹಾಗೂ ತಮ್ಮ ವಿದ್ಯಾರ್ಥಿಗಳೊಡಗೂಡಿ ತಾವೇ ಸಂಯೋಜಿಸಿದ ನೃತ್ಯಗಳ ಪ್ರದರ್ಶನವನ್ನು ನೀಡಿದ್ದಾರೆ.

ಸಂಘದ ಪೋಷಕರೊಬ್ಬರಲ್ಲಾದ, ಪತಿ ಶ್ರೀ ಕೆ.ಎಸ್. ಅನಂತ್‌ರವರ ಪೂರ್ಣ ಸಹಕಾರ–ಪ್ರೋತ್ಸಾಹ ಹಾಗೂ ಮಾವ, ಸಂಘದ ಹಿರಿಯ ಸದಸ್ಯ ಶ್ರೀ ಸೇತುರಾಂ ಕುಟುಂಬದವರ ಆಶೀರ್ವಾದ ತಂದೆ ಶ್ರೀಸತ್ಯನಾರಾಯಣ ಶಾಸ್ತ್ರಿ ದಂಪತಿಗಳ ಉತ್ತೇಜನ ಹೊಂದಿರುವ ಶ್ರೀಮತಿ ರಶ್ಮಿ ಅನಂತ್‌ಗೆ ಬೃಹಚ್ಚರಣ ಸಂಘವು ಶುಭ ಕೋರುತ್ತ ರಾಜ್ಯದ ಅತ್ಯುತ್ತಮ ನೃತ್ಯ ಸಂಯೋಜಕ ರಾಗಿ ಅನೇಕ ಪ್ರಶಸ್ತಿಗಳು ಲಭಿಸಲೆಂದು ಆಶಿಸುತ್ತದೆ.

■ ಸಂ.

## ವಾರ್ತಾ ಚಿತ್ರಗಳು



**ಸಂಘದ ವತಿಯಿಂದ ಲೆಕ್ಕಪರಿಶೋಧಕರಾದ ಶ್ರೀ ಬಿ.ಎನ್.ಜಿ. ಕುಮಾರ ಅವರಿಗೆ ಸನ್ಮಾನ**



**ಸಂಘದ ಪೋಷಕ ಶ್ರೀ ಚಂದ್ರಶೇಖರ್, ಶ್ರೀಮತಿ ರಮಾದೇವಿರವರ ಪುತ್ರಿ ಕು॥ ಅಂಜಲಿ ಶೇಖರ್‌ರವರು ಈ ಬಾರಿ ಬಿ.ಇ. (ಏವಿಯೇಷನ್ ಇಂಜಿನಿಯರ್) ಪದವಿಯನ್ನು ವಿಶ್ವೇಶ್ವರಯ್ಯ ವಿ.ವಿ.ಯಿಂದ ರಾಜ್ಯಕ್ಕೆ ಪ್ರಥಮರಾಗಿ ಬಂಗಾರದ ಪದಕ ಪಡೆದಿರುವುದು ಹೆಮ್ಮೆಯ ವಿಷಯ.**




**ಸಂಘದ ಸದಸ್ಯ ಶ್ರೀ ಕೆ.ಎಲ್. ವೇಣುಗೋಪಾಲ್, ಶ್ರೀಮತಿ ರಾಜೇಶ್ವರಿಯವರ ಪುತ್ರಿ ಡಾ. ರೇಖಾ ಎಂ.ಎಂ.ಬಿ.ಎಸ್. ದೆಹಲಿಯಲ್ಲಿ 12–5–14ರಂದು ನಡೆದ 18ನೇ ಡಿ.ಎನ್.ಬಿ. ಘಟಿಕೋತ್ಸವದಲ್ಲಿ "ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ"ಯ ಪದವಿಯನ್ನು UPSC ಅಧ್ಯಕ್ಷ ಶ್ರೀ ಪ್ರೊ. ಡಾ. ಅಗರವಾಲ್ ಹಾಗೂ ಅಧ್ಯಕ್ಷ NBE Board ಅಧ್ಯಕ್ಷ ಡಾ. ಕೆ. ಶ್ರೀನಿವಾಸ ರೆಡ್ಡಿಯವರಿಂದ ಪಡೆದರು.**

## ಸುದ್ದಿ ಮನೆ

### ಉಪನಯನ

ಸಂಘದ ಸದಸ್ಯ ಶ್ರೀ **ಎಲ್. ಪ್ರದೀಪ್ ಕುಮಾರ್** ದಂಪತಿಗಳು ತಮ್ಮ ಪುತ್ರ **ಚಿ॥ ಗಣೇಶನಿಗೆ** ಉಪನಯನವನ್ನು ತಾ॥ 4–5–2014 ರಂದು ಜಯನಗರದಲ್ಲಿ ನೆರವೇರಿಸಿದರು.

✤

ಸಂಘದ ಸದಸ್ಯ ಶ್ರೀ **ಟಿ.ಎನ್. ರಘು** ಹಾಗೂ **ಶ್ರೀಮತಿ ರಮ್ಯರವರು** ಪುತ್ರ **ಚಿ॥ ರಜತ್‌ಕೃಷ್ಣನಿಗೆ** ಉಪನಯನವನ್ನು ತಾ॥ 19–5–2014ರಂದು ಬೆಂಗಳೂರು ಶೇಷಾದ್ರಿಪುರಂನಲ್ಲಿ ನೆರವೇರಿಸಿದರು.

### ನಾಮಕರಣ

ಸಂಘದ ಸದಸ್ಯರಾದ **ಶ್ರೀನಿರಂಜನ್** ದಂಪತಿಗಳು ತಮ್ಮ ಮೊಮ್ಮಗು **ಚಿ॥ ಲಕ್ಷಿತ್. ಆರ್. ಭಾರದ್ವಾಜ್** (**ಶ್ರೀಮತಿ ಪದ್ಮಜ** ಮತ್ತು ಶ್ರೀ **ರವಿರವರ** ಪುತ್ರ) ನಾಮಕರಣ ಸಮಾರಂಭವನ್ನು ದಿನಾಂಕ: 18–5–2014ರಂದು ಕೆಂಗೇರಿಯ ಗಾಯತ್ರಿ ಮಂದಿರದಲ್ಲಿ ನೆರವೇರಿಸಿದರು.

✤

ಸಂಘದ ಸದಸ್ಯರಾದ ಶ್ರೀ **ರವೀಂದ್ರ** ದಂಪತಿಗಳು ತಮ್ಮ ಮೊಮ್ಮಗು **ಚಿ॥ ಧನ್ಯಶ್ರೀ (ಶ್ರೀಮತಿ ಆಶಾ** ಮತ್ತು ಶ್ರೀ **ಹೇಮಂತ್‌ಕುಮಾರ್**ರವರ ಪುತ್ರಿ)ಯ ನಾಮಕರಣ ಸಮಾರಂಭವನ್ನು ದಿನಾಂಕ: 2–6–2014ರಂದು ಬೆಂಗಳೂರಿನಲ್ಲಿ ನಡೆಸಿದರು.

✤

ಸಂಘದ ಸದಸ್ಯ ಶ್ರೀ **ರಾಧಾಕೃಷ್ಣ, ಶ್ರೀಮತಿ ಸಂಧ್ಯ** ದಂಪತಿಗಳು, 22–6–2014ರಂದು ತಮ್ಮ ಪುತ್ರನಿಗೆ ನಾಮಕರಣ ಮಹೋತ್ಸವವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

### ಶುಭ ವಿವಾಹ

ಸಂಘದ ಪೋಷಕ ಶ್ರೀ **ಬೆಟ್ಟುಕೋಟೆ ಈಶ್ವರಮೂರ್ತಿ** ಹಾಗೂ **ಶ್ರೀಮತಿ ನಾಗರತ್ನ**ರವರ ಪುತ್ರ **ಚಿ॥ ಯೋಗೀಶ್**ರವರನ್ನು **ಶ್ರೀಮತಿ ಸರಸ್ವತಿ ಹೆಚ್.ಡಿ. ಕೃಷ್ಣ**ರವರ ಪುತ್ರಿ **ಚಿ॥ ಸೌಮ್ಯ**ರವರೊಂದಿಗಿನ ವಿವಾಹವು ದಿನಾಂಕ : 9–5–14ರಂದು ಬೆಂಗಳೂರು ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

✤

ಸಂಘದ ಸದಸ್ಯ ಶ್ರೀ **ಅನಂತಪದ್ಮನಾಭ** ದಂಪತಿಗಳು ತಮ್ಮ ಪುತ್ರಿ ಶ್ವೇತಳನ್ನು **ಚಿ॥ ಜಿ.ವಿ. ಅಯ್ಯರ್**ರವರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು 25–4–2014ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.

### ನಾಗೇಶ್ವರ ಕ್ಷೇತ್ರದಲ್ಲಿ ಉಪಾಕರ್ಮ

ಸಹೃದಯ ವಿಪ್ರ ವೃಂದವು ಭಾನುವಾರ ದಿನಾಂಕ: 10–8–2014ರಂದು ಕಿತ್ತಿಗಾನಹಳ್ಳಿಯ ಲಕ್ಷ್ಮೀನಾರಾಯಣ ಕಲ್ಯಾಣ ಮಂಟಪದಲ್ಲಿ ಉಪಾಕರ್ಮ ವನ್ನು ಆಚರಿಸಲು ನಿರ್ಧರಿಸಲಾಗಿದೆ. ಕಾರ್ಯಕ್ರಮಕ್ಕೆ ತಾವು ಕುಟುಂಬ ಸಮೇತರಾಗಿ ಭಾಗವಹಿಸಲು ಕೋರಿಕೆ.

ವಿವರಗಳಿಗಾಗಿ: ಸಂಘದ ಖಜಾಂಚಿ, **ಎಸ್. ಸತ್ಯನಾರಾಯಣ** (ಮೊ. 9980945699) ಅಥವಾ ಕಾರ್ಯದರ್ಶಿ ಶ್ರೀ **ವಿ.ಎಸ್. ಮಣಿ** (ಮೊ. 9845055582)ರವರನ್ನು ಸಂಪರ್ಕಿಸಬಹುದಾಗಿದೆ. ಪೂಜಾಸಾಮಗ್ರಿ (ಪಂಚಪಾತ್ರೆ, ಉದ್ಧರಣೆ, ಅರ್ಘ್ಯಪಾತ್ರೆ) ತರಬೇಕಾಗಿ ವಿನಂತಿ. ಮಧ್ಯಾಹ್ನ ಭೋಜನದ ಏರ್ಪಾಡು ಮಾಡಲಾಗಿದೆ.

## ನೆನಪಿನಾಳದಿಂದ ಛಾಯಾಚಿತ್ರ - 13 ಮತ್ತು 14



ಡಾ. ಜಗದಾಪುರ್ ಎ. ಈಶ್ವರಮೂರ್ತಿ ಕುಟುಂಬ – 1940



ಕಿತ್ತಿಗಾನಹಳ್ಳಿ ಎಸ್. ವೆಂಕಟಾಚಲಯ್ಯರವರ ವಿವಾಹ ಮಹೋತ್ಸವದ ಸಂದರ್ಭದ ಚಿತ್ರ 1968.

## 2013–14ರ ಸಂಘದಿಂದ ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳು

**ಎಸ್.ಎಸ್.ಎಲ್.ಸಿ.:** ಜಯಂತ, ಜಯಶ್ರೀ, ಪೂಜಾ ಶಂಕರ್, ಪ್ರಣತಿ ಬಿ.ಎಸ್., ರಾಹುಲ್ ಕೃಷ್ಣ ಬಿ.ಎಸ್., ಸತೀಶ್ ಎಸ್., ಶರ್ಮದಾ ಕಶ್ಯಪ್, ಸ್ಮಿತಾ ದಿಕ್ಷಿತಾರೂಪ, ಸೌಂದರ್ಯ, ತೇಜಶ್ವಿನಿ ಆರ್., ವಿಶ್ವಾಸ ಎನ್.

**10ನೇ ಸಿಬಿಎಸ್‌ಇ :** ಪ್ರಣವ ಎಂ. ಶರ್ಮ, ಸಾಯಿ ಸಿಂಧುರ

**ಸಂಗೀತ :** ವಾಣಿಶ್ರೀ

**ದ್ವಿತೀಯ ಪಿ.ಯು.ಸಿ.:** ಐಶ್ವರ್ಯ, ಧೃತಿ, ಪ್ರತೀಕ್ಷಾ, ಸಂಪದಾ, ಶ್ರೇಯಸ್–ನಂದನ್, ಸುಮನ್ ಜಿ.

**ಬಿ.ಎ. :** ಪದ್ಮಶ್ರೀ ಮುರಳಿ

**ಬಿ.ಇ. :** ಅಂಜಲಿ ಶೇಖರ್, ನವೀನ್, ಸುಪ್ರೀತ ಎನ್.

**ಎಂ.ಟೆಕ್. :** ಸುಭಾಷಿಣಿ, ಸುಷ್ಮಾ ಟಿ.ಆರ್.

## ವಧುವರಾನ್ವೇಷಣೆ

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬ್ರಾಹ್ಮಣ ಸಮುದಾಯದ ವಧು–ವರ ಸಮಾವೇಶವನ್ನು ಶ್ರೀಶಂಕರ ವ್ಯಾಟ್ರಿಮೊನಿ ಸಹಯೋಗದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು 15ನೇ ಆಗಸ್ಟ್ 2014ರಂದು ಏರ್ಪಡಿಸಿದೆ. ಈ ಸಮಾವೇಶ ಕುಟುಂಬಗಳು ದ್ವಿಪಕ್ಷೀಯಮಾತುಕತೆ ವೈವಾಹಿಕ ಒಡಂಬಡಿಕೆಗಳನ್ನು ಇತ್ಯರ್ಥ ಮಾಡಿಕೊಳ್ಳಲು ವೇದಿಕೆಯಾಗಲಿದೆ. ಆಸಕ್ತರು ಇದರಲ್ಲಿ ಭಾಗವಹಿಸಲು ಕೋರುತ್ತೇವೆ.

ವಿವರಗಳಿಗೆ ಸಂಪರ್ಕಿಸಿ : ದೂರವಾಣಿ: **43000999**

## ಕ್ಷೇತ್ರ ಪ್ರವಾಸ

ಸದಸ್ಯರ ಆಸಕ್ತಿಯ ಮೇರೆಗೆ ಹಿಂದಿನ ವರ್ಷದಂತೆಯೇ ಈ ವರ್ಷವೂ ಸಹ, ದಿನಾಂಕ 21–9–2014 ಭಾನುವಾರದಂದು ಹಾಸನ ಜಿಲ್ಲಾ ಕಾವೇರಿ ನದಿ ತೀರದಲ್ಲಿರುವ **ರಾಮನಾಥಪುರ** ಧಾರ್ಮಿಕ ಕ್ಷೇತ್ರಕ್ಕೆ ಒಂದು ದಿನದ ಪ್ರವಾಸ ಏರ್ಪಡಿಸಲಾಗಿದ್ದು. ಪ್ರವಾಸಕ್ಕೆ ಪ್ರತಿ ವ್ಯಕ್ತಿಗೆ ರೂ. 800/– ರಿಂದ 900/– ರೂ. ವೆಚ್ಚ ತಗಲುವ ಅಂದಾಜು ಇದೆ. (ಉಪಹಾರ, ಊಟ ಸೇರಿ) ಆಸಕ್ತಿಯುಳ್ಳವರು ದಿನಾಂಕ: **31–8–2014**ರ ಒಳಗೆ ನೊಂದಾಯಿಸಿಕೊಳ್ಳಲು ವಿನಂತಿ.

ಹೆಚ್ಚಿನ ವಿವರಗಳಿಗಾಗಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಂಪರ್ಕಿಸ ಬಹುದಾಗಿದೆ.

### ಸದಸ್ಯರಿಂದ ಪೋಷಕರಾದವರು

*ಶ್ರೀಯುತರಾದ*

**ಜಿ.ಎಸ್. ವೆಂಕಟೇಶ್, ವಿ.ಎಸ್. ಮಣಿ,**
**ರಾಹುಲ್ ಶ್ರೀನಿವಾಸ್, ಬಿ. ಸುಬ್ರಹ್ಮಣ್ಯಂ, ಬೇಬಿ ಸ್ಕಂದ,**

### ಸಂಘಕ್ಕೆ ಹೊಸ ಸದಸ್ಯರು

**ಶ್ರೀಮತಿ ಜಿ.ಎಸ್.ಇಂದಿರಾ, ಶ್ರೀ ಕೆ.ಎಲ್.ಸುಂದರೇಶ್,**
**ಶ್ರೀ ಅರುಣ್ ಜಿ.ಕಾರ್ತಿಕ್**



### ವೇ॥ ಬ್ರಾ॥ ಶ್ರೀ ಮುನಷಿ
## ಎಸ್. ರಾಮೇಶ್ವರಯ್ಯನವರು

ಇವರು 1905ರ ಅಕ್ಟೋಬರ್ 18ರಂದು ಸರ್ಜಾಪುರದ ಹೆಸರಾಂತ ಕರಣೀಕ ವಂಶದ ಶ್ರೀ ದೇವಣ್ಣಯ್ಯ ಮತ್ತು ಶ್ರೀಮತಿ ಅಕ್ಕಮ್ಮನವರ ಪುತ್ರರು. ಆಗಿನ ಕಾಲದಲ್ಲಿಯೇ ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಔಪಚಾರಿಕ ಶಿಕ್ಷಣದ ಜೊತೆಗೆ ಅಸಾಧಾರಣ ವ್ಯವಹಾರ ಕೌಶಲ್ಯವನ್ನೂ ಜ್ಞಾನಾರ್ಜನೆಯನ್ನು ರೂಢಿಸಿಕೊಂಡರು. ಕರಣೀಕ ವೃತ್ತಿಯ ಜೊತೆಗೆ ಸಮಾಜಸೇವಾ ಕಾರ್ಯಗಳಲ್ಲಿಯೂ ಮುಂದಾಳಾಗಿ ಸೇವೆ ಸಲ್ಲಿಸಿ ಸರ್ಜಾಪುರದಲ್ಲಿ 1960ರಲ್ಲಿ ಸ್ಥಾಪಿಸಲಾದ ಎಸ್.ವಿ.ಪಿ. ಪ್ರೌಢಶಾಲೆಯ ಸ್ಥಾಪಕ ಸದಸ್ಯರು, ಜಂಟಿ ಕಾರ್ಯದರ್ಶಿಗಳಾಗಿ, ಶ್ರೀ ಕಲ್ಯಾಣ ಕೋದಂಡರಾಮಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಅನುಪಮಸೇವೆ ಸಲ್ಲಿಸಿರುತ್ತಾರೆ. ತಾವು ಸ್ಥಾಪಿಸಿದ ಪ್ರೌಢಶಾಲೆಯ ಗ್ರಂಥಾಲಯಕ್ಕೆ ಒಂದು ಲಕ್ಷಕ್ಕೂ ಮೀರಿದ ಪುಸ್ತಕಗಳನ್ನು ದಾನವಾಗಿ ನೀಡಿದ್ದು, ಸಾರ್ವಜನಿಕರ ಸೇವೆಗಾಗಿ ಅನೇಕ ಗೌರವ, ಸನ್ಮಾನಗಳನ್ನು ಪಡೆದಿದ್ದು, ಕೆಲಕಾಲ ಆರ್ಯವಿದ್ಯಾಶಾಲೆಯಲ್ಲಿ ಅಧ್ಯಾಪಕರಾಗಿಯೂ, ರೆಡ್‌ಕ್ರಾಸ್ ಸಂಸ್ಥೆಯಲ್ಲಿಯೂ ಸೇವೆ ಸಲ್ಲಿಸಿರುತ್ತಾರೆ. ಸರ್ಜಾಪುರದಲ್ಲಿ ನೆನಪಲ್ಲಿ ಉಳಿಯುವಂತಹ ಕಾರ್ಯನಿರ್ವಹಿಸಿರುವ ಶ್ರೀಯುತರು ಬೃಹಚ್ಚರಣ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು.

■ **ಸರ್ಜಾಪುರ ಶ್ರೀನಿವಾಸ್**




## ಪೋಷಕ ಸದಸ್ಯರಾಗಲು ಮನವಿ

ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ಈಗಾಗಲೇ 1,000/–ರೂ.ಗಳನ್ನು ನೀಡಿ ಸದಸ್ಯರಾಗಿರುವವರು ಬಾಕಿ 4,000/– ರೂ.ಗಳನ್ನು (ಅವಶ್ಯವಿದ್ದರೆ 4 ಕಂತುಗಳಲ್ಲಿ) ನೀಡಿ **'ಪೋಷಕ'** ಸದಸ್ಯರಾಗಬಹುದು. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ವಿನಂತಿ.

ತಾವುಗಳು ಈ ಮನವಿಗೆ ಸ್ಪಂದಿಸಿದಲ್ಲಿ ಸಂಘದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ಸಹಾಯವಾಗುತ್ತದೆ

## ನೆನಪಿನಾಳದಿಂದ ಛಾಯಾಚಿತ್ರ - 15



ಮಟ್ಟನಹಳ್ಳಿ ಶ್ರೀರಂಗಪ್ಪನವರ ಕನಕಾಭಿಷೇಕ ಸಂದರ್ಭದಲ್ಲಿ ತೆಗೆದ ಕುಟುಂಬ ಚಿತ್ರ 1957
(ಮಟ್ಟನಹಳ್ಳಿ ರಂಗಪ್ಪ–ಮಗ, ಶ್ರೀ ಎಂ.ಆರ್. ಶ್ರೀಕಂಠಶರ್ಮ ಮಗ, ಶ್ರೀ ಎಂ.ಎಸ್.ಎಸ್. ನಾರಾಯಣರ ಮಗ, ಶ್ರೀ ಡಾ. ಎಂ.ಎಸ್. ವಾಸನ್)

# ಕನಕಾಭಿಷೇಕ

ಮಾನವ ಜನ್ಮ ಬಂದ 60 ವರ್ಷದ ನಂತರ (60 ಸಂವತ್ಸರಗಳನ್ನು ಹುಟ್ಟಿದಂದಿನಿಂದ ಕಳೆದ ಮೇಲೆ) ಷಷ್ಠಿ ಪೂರ್ತಿ ಶಾಂತಿ, 70ನೇ ವರ್ಷದಲ್ಲಿ ಭೀಮರಥ ಶಾಂತಿ ಮತ್ತು 80 ವರ್ಷಗಳ ನಂತರ ಸಹಸ್ರ ಚಂದ್ರದರ್ಶನ (80 ವರ್ಷಕ್ಕೆ 12 ಹುಣ್ಣಿಮೆಯಂತೆ 960 ಮತ್ತು 40 ಅಧಿಕ ಮಾಸದ ಹುಣ್ಣಿಮೆ = ಒಟ್ಟು 1000 ಚಂದ್ರ) ಶಾಂತಿ ಮಾಡಿಕೊಳ್ಳುವ ಸಂಪ್ರದಾಯ ಬೆಳೆದುಬಂದಿದೆ. ಇದರ ಜೊತೆಗೆ ಪ್ರಪೌತ್ರ (ಮರಿಮಗ=ಮಗನ ಮೊಮ್ಮಗ) ಜನಿಸಿದ ನಂತರ ಕನಕಾಭಿಷೇಕ ಎನ್ನುವ ಪದ್ಧತಿಯನ್ನು ಆಚರಿಸುತ್ತಾರೆ. ಇದು ಹಿರಿಯರಿಗೆ ಬ್ರಹ್ಮಲೋಕ ಪ್ರಾಪ್ತಿಗಾಗಿ ಆಚರಿಸುವ ಶಾಸ್ತ್ರವಿಧಿ. ತನ್ನ ಮುಂದಿನ ಮೂರು ತಲೆಮಾರಿನವರ ಬದುಕನ್ನು ಕಂಡು ಸುಖ–ದುಃಖ ಎರಡನ್ನೂ ಅನುಭವಿಸಿ ನಂತರ ಕನಕ (ಬಂಗಾರ)ದಂತೆ ದೋಷವಿಲ್ಲದ ಪರಿಪಕ್ವತೆ ಪಡೆದು, ಜ್ಞಾನಪೂರ್ಣರಾಗುವ ಸಂಕೇತ.

ಶಾಸ್ತ್ರದ ಪ್ರಕಾರ ಗಣೇಶ ಪ್ರಾರ್ಥನೆ ಮಾಡಿ, 5 ಕಳಶದೊಂದಿಗೆ ನವಗ್ರಹಗಳನ್ನು, ಮೃತ್ಯುಂಜಯನನ್ನು ಆವಾಹನೆ ಮಾಡಿ ಪೂಜಿಸುತ್ತಾರೆ. ನಂತರ ಪುಣ್ಯಾಹ, ವಾಸ್ತು ಪುರುಷ ಆವಾಹನೆ, ನಾಂದಿ, ಹೋಮಕಾರ್ಯ ಮಾಡುತ್ತಾರೆ. ಪ್ರಧಾನ ಹೋಮದಲ್ಲಿ ನವಗ್ರಹಹೋಮ, ಮೃತ್ಯುಂಜಯ ಹೋಮ, ವಾಸ್ತುಹೋಮ, ದುರ್ಗಾಹೋಮ, ಸಾದ್ಗುಣ್ಯದೇವತಾ, ಕ್ಷೇತ್ರಪಾಲಕ, ಕ್ರತು ಸಂರಕ್ಷಣಾ ದೇವತಾ, ಸ್ವಿಷ್ಟಕೃದ್ಧೋಮ, ಅಪ ಉಪಸ್ಪೃಶ್ಯ, ಛಂದರ್ಷಿ ವರ್ಜ್ಯಂ, ಪೂಜಾವಿಧಿಗಳಾಗಿ ಪೂರ್ಣಾಹುತಿ ಮಾಡುತ್ತಾರೆ. ಪುರುಷ ಸೂಕ್ತ, ಶ್ರೀ ಸೂಕ್ತ, ದುರ್ಗಾಸೂಕ್ತ ಪಾರಾಯಣ ಆದ ಮೇಲೆ ಯಜಮಾನನಿಗೆ ಅಮೃತಾಭಿಷೇಕ ಮಾಡುತ್ತಾರೆ. ಬಟ್ಟೆ ಬದಲಿಸಿದ ಮೇಲೆ ಹೊಸವಸ್ತ್ರ ತೊಟ್ಟು ಬಂಗಾರ, ಬೆಳ್ಳಿ ಪುಷ್ಪಗಳಿಂದ ಅವರಿಗೆ ಪ್ರಪೌತ್ರನಿಂದ ಅಭಿಷೇಕ ಮಾಡಿಸುತ್ತಾರೆ. ಕೊನೆಯಲ್ಲಿ ನೀರಾಂಜನ ನಡೆಸುತ್ತಾರೆ.

ಪುರೋಹಿತರ ಮುಖೇನ ವಿಧಿಗಳು ನಡೆಯುವುದರಿಂದ ಅವರಿಗೆ ದಾನ ಧರ್ಮ ಮಾಡಿ ಬಂದ, ಬಂಧು, ಬಳಗ, ಮಿತ್ರರಿಗೆ ಭೋಜನ ಕಾರ್ಯಕ್ರಮ ನೆರವೇರಿಸುತ್ತಾರೆ. ತುಂಬು ಸಂಸಾರದ ಯಜಮಾನರಾದ್ದರಿಂದ, ಅನುಭವಿಯೂ ಆಗಿರುವುದರಿಂದ ಅವರಿಂದ ಕಿರಿಯರೆಲ್ಲಾ ಆಶೀರ್ವಾದ ಪಡೆದು ಸಂತುಷ್ಟರಾಗುತ್ತಾರೆ. ಈ ಶುಭ ಘಳಿಗೆಯು ಎಲ್ಲರ ಮನದಲ್ಲೂ ಸಂತೋಷ ತಂದು ಎಂದೆಂದಿಗೂ ನೆನೆಯುವಂತೆ ಇರುತ್ತದೆ.

**ಸರ್ವೇಜನಾಃ ಸುಖಿನೋ ಭವಂತು**

**ಸಮಸ್ತ ಸನ್ಮಂಗಳಾನಿ ಭವಂತು**



■ ಲಲಿತಾ ರಮೇಶ್
23404860



# ವೃದ್ಧಾಶ್ರಮ

ಸಂಬಂಧವೆಂಬುದು ಪ್ರತಿಯೊಬ್ಬರಿಗೂ ಇರಲೇಬೇಕಾದ ಒಂದು ಅಮೂಲ್ಯವಾದ ನಂಟು. ಈ ಸಂಬಂಧಗಳು ಯಾವ ರೀತಿಯದಾದರೂ ಅದಕ್ಕೆ ತನ್ನದೆ ಆದ ಛಾಪು ಇರುತ್ತದೆ. ತಂದೆ, ಮಕ್ಕಳು, ಸಹೋದರ ಸಹೋದರಿಯರು, ಗೆಳೆಯ, ಗೆಳತಿಯರು ಹೀಗೆ ಹತ್ತು ಹಲವಾರು ರೀತಿಯ ಸಂಬಂಧಗಳುಂಟು.

ಮೊದಲನೆಯದಾಗಿ ತಂದೆ, ತಾಯಿ ಹಾಗೂ ಮಕ್ಕಳ ಸಂಬಂಧ ಅತಿ ಪ್ರಮುಖವಾದುದು. ಮಾತಾ ಪಿತೃಗಳು ತಮ್ಮ ಮಕ್ಕಳ ಏಳಿಗೆಯ ಸಲುವಾಗಿ ಪಡುವ ಕಷ್ಟಕಾರ್ಪಣ್ಯಗಳನ್ನು ಒಂದೆರಡು ಮಾತುಗಳಲ್ಲಿ ಬಣ್ಣಿಸಲು ಸಾಧ್ಯವಿಲ್ಲ. ಏನೇ ಬರಲಿ ಅದನ್ನು ತಮ್ಮ ಮಕ್ಕಳ ಸಲುವಾಗಿ ಎದುರಿಸಲು ಸಿದ್ಧರಿರುತ್ತಾರೆ. ಸಾಮಾನ್ಯವಾಗಿ ಬೆಳೆದು ನಿಂತ ಮಕ್ಕಳು, ತಂದೆ ತಾಯಿಗಳು ಮಕ್ಕಳಲ್ಲಿ ಭೇದ ಭಾವ ಮಾಡುತ್ತಾರೆಂದು ಉಡಾಫೆ ಮಾತುಗಳನ್ನು ಹೇಳುತ್ತಲೇ ಇರುತ್ತಾರೆ. ಆದರೆ ಅವರಿಗೆ ಎಲ್ಲಾ ಮಕ್ಕಳು ಒಂದೇ ಎರಡು ಕಣ್ಣಿನಲ್ಲಿ ಯಾವುವು ಶ್ರೇಷ್ಠ ಅಂದ ಹಾಗೆ ಇದೂ ಕೂಡ.

ಎರಡನೆಯದಾಗಿ ತಂದೆ–ತಾಯಿಗಳು ನಮಗೆ ತೋರುವ ಅಕ್ಕರೆ, ಪ್ರೀತಿ ವಾತ್ಸಲ್ಯಗಳ ಮುಂದೆ. ನಾವು ಮಾಡುವುದೆಲ್ಲ ಗೌಣವೆನಿಸುತ್ತದೆ. ಇದು ಎಲ್ಲರಿಗೂ ಅನ್ವಯಿಸುವುದಿಲ್ಲ. ಒಬ್ಬ ತಾಯಿ ಹತ್ತು ಮಕ್ಕಳನ್ನು ಸಾಕಿ, ಸಲುಹಿ ಒಳ್ಳೆಯ ಪ್ರಜೆಯನ್ನಾಗಿಸುತ್ತಾಳೆ. ಆದರೆ ಆ ತಾಯಿಗೆ ಅದೇ ಮಮತೆ ಮಕ್ಕಳಿಂದ ಸಿಗುತ್ತದೆಯೇ ಎಂಬುದೇ ಒಂದು ಪ್ರಶ್ನೆ.

ಯಾವಾಗ ತಂದೆ–ತಾಯಿಗಳನ್ನು ನೋಡಿಕೊಳ್ಳಲು ಮಕ್ಕಳಲ್ಲಿ ಪೈಪೋಟಿ ಪ್ರಾರಂಭವಾಯಿತು, ಆಗ ಉಗಮವಾದದ್ದೇ ಈ ವೃದ್ಧಾಶ್ರಮ (old age home) ಇದು ನಮ್ಮ ಭಾರತದ ಸಂಸ್ಕೃತಿಯಲ್ಲ. ಇದು ನಮಗೆ ಪಾಶ್ಚಿಮಾತ್ಯ ದೇಶದ ಕೊಡುಗೆ ಈ ವೃದ್ಧಾಶ್ರಮದ ಬಗ್ಗೆ ನಮ್ಮಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತದೆ.

1) ವೃದ್ಧಾಶ್ರಮ ಯಾರಿಗೇ ಅಗತ್ಯ ಹಾಗೂ ಅನುಕೂಲ?
2) ವೃದ್ಧಾಶ್ರಮದಲ್ಲಿ ಎಲ್ಲರೂ ಸಂತೋಷದಿಂದ ಇರುತ್ತಾರೆಯೇ?
3) ತಂದೆ ತಾಯಿಯವರನ್ನು ವೃದ್ಧಾಶ್ರಮಕ್ಕೆ ಬಿಟ್ಟ ನಂತರ ಮಕ್ಕಳಿಗೆ ನೆಮ್ಮದಿ ಸಾಧ್ಯವೇ?

ಈ ಪ್ರಶ್ನೆಗಳಿಗೆ ಉತ್ತರಿಸುವುದು ಬಲು ಕಷ್ಟ. ಪಾಶ್ಚಿಮಾತ್ಯ ದೇಶಗಳಲ್ಲಿ ಇದು ಅಪರೂಪವೇ ಅಲ್ಲ. ಅಲ್ಲಿನ ಜೀವನ ಶೈಲಿ, ಸಂಬಂಧಗಳು ಇವಕ್ಕೆ ಅನುಗುಣವಾಗಿ ಇದು ದೊಡ್ಡ ವಿಷಯವೇನಲ್ಲ. ಆದರೆ ನಮ್ಮ ದೇಶದ ಸಂಸ್ಕೃತಿಗೆ ಇದು ಅಷ್ಟು ಸಮಂಜಸವಿಲ್ಲವೇನೊ ಎಂದು ಅನಿಸುತ್ತದೆ.

ಮಕ್ಕಳು ಬೆಳೆದು ದೊಡ್ಡವರಾದ ಮೇಲೆ, ತಂದೆ ತಾಯಿ ಮತ್ತಷ್ಟು ವಯಸ್ಕರಾಗಿರುತ್ತಾರೆ. ಮನೆಯಲ್ಲಿ ಮೊಮ್ಮಕ್ಕಳಿದರೆ ಅಜ್ಜಿ–ಅಜ್ಜಿಯವರಿಗೆ ಬಲುಪ್ರೀತಿ. ಆ ಮಕ್ಕಳಿಗೂ ಅಜ್ಜ–ಅಜ್ಜಿಯರ ಸಾಮೀಪ್ಯ ಬಲು ಪ್ರಿಯ. ಅವರು ಹೇಳುವ ಕಥೆಗಳೂ, ಮಾಡುವ ತಿಂಡಿ–ತಿನಿಸುಗಳೂ ಹಾಗೂ ಕೊಡುವ ಮಾರ್ಗದರ್ಶನ ಮಕ್ಕಳಿಗೆ ಬಲು ಪ್ರಿಯವೆನಿಸುತ್ತದೆ.

ಹಾಗಾದರೆ, ವೃದ್ಧಾಶ್ರಮಕ್ಕೆ ಸೇರಿಸುವುದು ತಪ್ಪೇ? ಎನ್ನುವ ಪ್ರಶ್ನೆಗೆ, ಉತ್ತರ ಕಷ್ಟ ಹಲವಾರು ಕಾರಣಗಳಿಂದ ವೃದ್ಧಾಶ್ರಮಕ್ಕೆ ಸೇರಿಸುವ ಅನಿವಾರ್ಯತೆ ಉಂಟಾಗಬಹುದು. ಉದಾ: ಪರದೇಶದಲ್ಲಿ ಮಕ್ಕಳು ನೆಲಸಿದ್ದು ವರುಷಕ್ಕೊಮ್ಮೆ ಬರಬೇಕಾದ ಸಂದರ್ಭದಲ್ಲಿ ಇದು ಅನಿವಾರ್ಯವೆನಿಸಬಹುದು. ಅವರಿಗಾಗಿ ಸಾಕಷ್ಟು ಹಣ ಖರ್ಚು ಮಾಡಬಹುದು. ಆದರೆ ಅವರಿಗೆ ಬೇಕಾದ ಪ್ರೀತಿ ಕೊಡುವವರು ಯಾರು?

ಇತ್ತೀಚಿನ ದಿನಗಳಲ್ಲಿ ತಂದೆ–ತಾಯಿಗಳನ್ನು ವೃದ್ಧಾಶ್ರಮದಲ್ಲಿ ಬಿಡುವವರ ಸಂಖ್ಯೆ ಹೆಚ್ಚಾಗುತ್ತಿವೆ. ಇದು ಸಂಪೂರ್ಣವಾಗಿ ತಪ್ಪು ಎಂದು ನಾನು ಹೇಳುವುದಿಲ್ಲ. ಕೆಲವೊಂದು ಪರಿಸ್ಥಿತಿಗಳಲ್ಲಿ ಅನಿವಾರ್ಯ ಕಾರಣಗಳಿಂದ ವೃದ್ಧಾಶ್ರಮದಲ್ಲಿ ಬಿಡಬೇಕಾಗಿಬರುತ್ತದೆ. ಉದಾ: ವಯಸ್ಸಾದವರನ್ನು ಗಮನಿಸಲು ಯಾರೂ ಇಲ್ಲದ ಸಮಯದಲ್ಲಿ ಹಾಗೂ ಅವರಿಗಾಗಿ ಯಾರೂ ಇಲ್ಲದಿರುವ ಸಂದರ್ಭಗಳಲ್ಲಿ ವೃದ್ಧಾಶ್ರಮಗಳು ಬಹಳ ಮುಖ್ಯವೆನಿಸುತ್ತದೆ.

ವಯಸ್ಸಾದ ಕಾಲದಲ್ಲಿ ಪ್ರೀತಿ ವಿಶ್ವಾಸಗಳೇ ಮುಖ್ಯ ಮಿಕ್ಕೆಲ್ಲವೂ ಗೌಣವೆನಿಸುತ್ತದೆ. ತಮ್ಮ ಮಕ್ಕಳು ತೋರಿಸುವ ವಿಶ್ವಾಸದ ಮುಂದೆ ಮತ್ತಾವುದು ಅವರಿಗೆ ಬೇಡವೆನಿಸುತ್ತದೆ. ವಯಸ್ಸಾದ ಮೇಲೆ ಅವರ ಪ್ರತಿಯೊಂದು ನಡೆ–ನುಡಿಗಳು ನಮಗೆ ಕಿರಿಕಿರಿಯನ್ನುಂಟು ಮಾಡುತ್ತದೆ. ಏಕೋ ಇದಕ್ಕೆ ನಮ್ಮಲ್ಲಿ ಉತ್ತರವಿಲ್ಲ. ವಯಸ್ಸಾದ ಮೇಲೆ ಅವರಿಗೆ ಪ್ರತಿಯೊಂದು ವಿಷಯವೂ ತಿಳಿಯಬೇಕೆಂಬ ಕುತೂಹಲವಿರುತ್ತದೆ. ವಯಸ್ಸಾದವರನ್ನು ಮಕ್ಕಳಂತೆ ರಮಿಸಬೇಕು ಎಂಬುದು ಈಗಿನ ಪರಿಸ್ಥಿತಿಯಲ್ಲಿ ತಮಾಷೆ ಎನಿಸುತ್ತದೆ.

ಈಗಿನ ಆಧುನಿಕ ಯಂತ್ರ ಯುಗದಲ್ಲಿ ನಮಗೆ ಸಮಯದ ಕೊರತೆ ಇರುವುದರಿಂದ, ನಮಗೆ ವಯಸ್ಸಾದವರ ಜೊತೆ ಕಳೆಯಲು ಸಮಯವೆಲ್ಲಿದೆ? ಅವರು ಏನನ್ನು ನಮ್ಮಿಂದ ಬಯಸುತ್ತಾರೆ ಎಂಬುದು ನಮಗೆ ತಿಳಿದಿಲ್ಲವೇ! ಅಜ್ಜ–ಅಜ್ಜಿಯವರಿಗೆ ಮಕ್ಕಳಿಗಿಂತ ಮೊಮ್ಮಕ್ಕಳ ಬಗ್ಗೆ ಒಲವು ಜಾಸ್ತಿ. ಇದೆಲ್ಲಾ ಅವರು ವೃದ್ಧಾಶ್ರಮದಲ್ಲಿ ಪಡೆಯಲು ಸಾಧ್ಯವೇ? ಇದಕ್ಕೆಲ್ಲಾ ಉತ್ತರವೇ ಇಲ್ಲ.

ಕಡೆಯದಾಗಿ ನನ್ನ ಅನಿಸಿಕೆ ಎಂದರೆ ನಾವು (ಸಾಧ್ಯವಾಗುವವರೆಗೆ) ತಂದೆ–ತಾಯಿಗಳ ಸನಿಹದಲ್ಲಿರೋಣ. ಪರಿಸ್ಥಿತಿ ಕೈ ಮೀರಿದಾಗ ಮಾತ್ರ ವೃದ್ಧಾಶ್ರಮದ ಮೊರೆ ಹೋಗಬಹುದಲ್ಲವೇ?

■ ಬಿ.ಪಿ. ಸರಸ್ವತಿ
7760634277



## ಛಾಯಾಚಿತ್ರ ಪ್ರಕಟಣೆಗೆ ಆಹ್ವಾನ

**ಬಂಧುಗಳೇ, ತಮ್ಮ ಅವಿಭಕ್ತ ಕುಟುಂಬದ ಹಳೆಯ ಛಾಯಾಚಿತ್ರವನ್ನು 'ಬೃಹಚ್ಚರಣ'ದ 'ನೆನಪಿನಾಳದಿಂದ ಛಾಯಾಚಿತ್ರ' ಶೀರ್ಷಿಕೆಯಡಿ ಪ್ರಕಟಿಸಲು ಕಳುಹಿಸಿಕೊಡಲು ವಿನಂತಿ.**

**ನಮ್ಮ 'ಬೃಹಚ್ಚರಣ' ಪತ್ರಿಕೆಯನ್ನು ಪ್ರೋತ್ಸಾಹಿಸಲು ಜಾಹಿರಾತುಗಳನ್ನು ನೀಡಲು ವಿನಂತಿ.**

–ಸಂ.



# ಅಡುಗೆ

## ಅನಾನಸ ಗೊಜ್ಜು

ಬೇಕಾದ ಸಾಮಗ್ರಿ =ಅನಾನಸ್ 1 ಹಣ್ಣು, ಉದ್ದಿನಬೇಳೆ, ಮೆಣಸು 10 ಕಾಳು, ಮೆಂತ್ಯ 4–6 ಕಾಳು, ಒಣಮೆಣಸಿನಕಾಯಿ (ಬ್ಯಾಡಗಿ) 20–25, ಅರಿಶಿನ, ಇಂಗು, ಉಪ್ಪು, ಒಗ್ಗರಣೆಗೆ ಎಣ್ಣೆ, ಸಾಸಿವೆ, ಕೊಬ್ಬರಿತುರಿ, ಬೆಲ್ಲ ಒಂದು ಚಿಕ್ಕ ಗಾತ್ರದ್ದು.

**ಮಾಡುವ ವಿಧಾನ** :ಅನಾನಸ್ ಹಣ್ಣನ್ನು ಚಿಕ್ಕ ಹೋಳುಗಳಾಗಿ ಮಾಡಿ ನೀರಿನಲ್ಲಿ ಹಾಕಿ ಬೇಯಿಸಿ. ಬಾಣಲೆಯಲ್ಲಿ ಉದ್ದಿನಬೇಳೆ, ಮೆಣಸು, ಮೆಂತ್ಯ, ಇಂಗು, ಒಣಮೆಣಸಿನಕಾಯಿ ಹಾಕಿ ಹುರಿಯಬೇಕು. ಎಲ್ಲಾ ತಣ್ಣಗಾದ ಮೇಲೆ ಕೊಬ್ಬರಿ ಸಮೇತ ಬೆಂದ ಹಣ್ಣನ್ನು ಮಿಕ್ಸರ್‌ಗೆ ಹಾಕಿ ರುಬ್ಬಬೇಕು. ಆ ನಂತರ ಒಗ್ಗರಣೆ ಹಾಕಿ ರುಬ್ಬಿದ್ದನ್ನು ಹಾಕಿ ಬೆಲ್ಲ, ಅರಿಶಿನ ಹಾಕಿ ಘಾಟು ಹೋಗುವವರೆಗೆ ಕುದಿಸುವುದು.

(ಬೆಂದ ಹೋಳು ಸ್ವಲ್ಪ ಕುದಿಯುವಾಗ ಹಾಕಬಹುದು)

✤ ✤

## ಮಾವಿನ ಕಾಯಿ ತೊಕ್ಕು

**ಬೇಕಾದ ಸಾಮಾನು :** ದೊಡ್ಡ ಮಾವಿನಕಾಯಿ 1, ಒಣಮೆಣಸಿನ ಕಾಯಿ 30–35, ಮೆಂತ್ಯ 10 ಕಾಳು, ಇಂಗು, ಉಪ್ಪು, ಎಣ್ಣೆ 10 ಚಮಚ ಸಾಸಿವೆ.

**ಮಾಡಬೇಕಾದ ವಿಧಾನ :** ಮಾವಿನಕಾಯಿಯನ್ನು ತೊಳೆದು ತುರಿಯುವುದು, ಬಾಣಲೆಗೆ ಒಣಮೆಣಸಿನಕಾಯಿ, ಮೆಂತ್ಯ, ಇಂಗು ಹಾಕಿ ಹುರಿದು ಸ್ವಲ್ಪ ಮಾವಿನ ಕಾಯಿಯೊಂದಿಗೆ ಉಪ್ಪು ಹಾಕಿ ತಿರುವುದು.

ಬಾಣಲೆಗೆ ಎಣ್ಣೆ ಹಾಕಿ, ಸಾಸಿವೆ ಸಿಡಿಸಿ, ರುಬ್ಬಿದ್ದನ್ನು ಹಾಕಿ ಚೆನ್ನಾಗಿ ಬಾಡಿಸುವುದು. (ಬಣ್ಣ ಬದಲಾಗಿ ಎಣ್ಣೆ ಬಿಡುವ ತನಕ)

■ ಲಲಿತ ಆರ್.

## ಪ್ರಾಣಿ ಪರೋಪಕಾರ

**ಇರುವೆ** ತಾನು ಶಿಸ್ತಿನ ಸೈನಿಕನಂತೆ ಕಲಿಯೋಣ ಈ ಗುಣ ಇದರಿಂದ
ಅಗುಳೊಂದಾದರು ದೊರೆತರೆ **ಕಾಗೆ** ಬಳಗವನೆಲ್ಲ ಕರೆಯುವುದು ಮುದದಿಂದ.
ತುತ್ತ ಅನ್ನವನು ನೀಡಿದ ದಣಿಯ ಜೀವನ ಕಾಯ್ವುದು ಆ **ನಾಯಿ**
ಒಣಹುಲ್ಲನೇ ತಾ ಪ್ರೀತೀಲಿ ತಿಂದು ಹಾಲನು ನೀಡುವುದು **ಗೋತಾಯಿ**.
ಕಸವನು ತಿಂದು ಕಸದಲಿ ಬೆಳೆದ **ಎತ್ತು** ಉಳುವುದು ಭೂಮಿಯನು
ಪ್ರೇಮದಿ ಬೆಳೆಸಿದ **ಕುದುರೆಯು** ತಾನು ಹೊರುವುದು ಸವಾರನ ಭಾರವನು.
ತನ್ನನು ತಾನೇ ಸಾವಿಗೆ ದೂಡಿ **ಹುಳು** ನೀಡುವುದು ರೇಷ್ಮೆಯನು.
ಕಾಡಿನ ತರುಲತೆ ತಿನ್ನುತ ಉಂಡು ರೇಷ್ಮೆಯನು, **ಕುರಿಯು** ನೀಡುವುದು ಬೆಚ್ಚಗಿನ ಉಣ್ಣೆಯನು.
ಮೈಲಿಗೆಯಾಗಿಹ ಬಟ್ಟೆಯ ಒಗೆಯುವವ ರಜಕನ ಜೊತೆಗೆ
ಮಡಿಯಾಗಿಸುವುದು ಆ **ಗಾರ್ದಭವು**.
ಉಪಕಾರದ ಈ ಪ್ರಾಣಿಯ ಗುಣಗಳು ಎಳ್ಳೆನಿತಿಲ್ಲ ಈ ಮಾನವಗೆ
ಸ್ವಾರ್ಥದಿ ಮುಳುಗಿಹ ಮಾನವ ತಾನು ಈ ಪ್ರಾಣಿಗುಣಗಳ
ಕಲಿತರೆ ಚೆಂದ ಧರೆಯೊಳಗೆ.

■ ನಾಗರತ್ನ ಶೇಷಗಿರಿ
ಸರ್ಜಾಪುರ, 9740819669

# ನಮ್ಮ ಕರ್ತವ್ಯ

ಪ್ರಪಂಚ, ದೇಶ, ರಾಜ್ಯ, ಜಿಲ್ಲೆ ನಾವುಗಳು ವಾಸಿಸುವ ಬಡಾವಣೆ, ರಸ್ತೆ ಅಲ್ಲಿಗೂ ಮುಂದೆ ನಾವು ವಾಸಿಸುವ ಮನೆಯ ಸುತ್ತಮುತ್ತ ನಮ್ಮ ಮನೆ ಅಲ್ಲಿಯವರೆಗೂ ನಮ್ಮ ಕರ್ತವ್ಯಗಳು ಇವೆ. ಚಿಕ್ಕಪುಟ್ಟ ದಾದರೂ ಹಲವಾರು ಮುಖ್ಯವಾದ, ಸಕಲರಿಗೂ ಅನುಕೂಲ ವಾಗುವಂಥ ಕೆಲವು ಕರ್ತವ್ಯಗಳನ್ನು ನಾವು ವಾಸಿಸುವ ಸಮಾಜದಲ್ಲಿ ಮಾಡಲೇಬೇಕು. ಹಕ್ಕು ಚಲಾಯಿಸುವ ಮುನ್ನ ನಾವು ಪಾಲಿಸುವ ಕರ್ತವ್ಯ ಬಹಳ ಹಿರಿದಾದುದು. ಇದಕ್ಕಿಂತ ಮುಖ್ಯ ಸಮಾಜದಲ್ಲಿ ನಮ್ಮ ಜವಾಬ್ದಾರಿ.

ಯಾವುದಾದರೂ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿದ್ದಾಗ ನಾವು ಅನುಸರಿಸಬಹುದಾದ ಕೆಲವು ನಿಯಮಗಳು ನಮಗೂ ನಮ್ಮ ಸುತ್ತಲಿನವರಿಗೂ ಆಹ್ಲಾದ ತರುವಂತಹುದಾಗುತ್ತದೆ.

1) ಕಾರ್ಯಕ್ರಮ ಸ್ಥಳಕ್ಕೆ ಹೋದಾಗ ಮೊದಲಿಗೆ ಚಪ್ಪಲಿಗಳನ್ನು ಸಾಲಿನಲ್ಲಿ ಸರಿಯಾಗಿ ಜೋಡಿಸಿ ಬಿಡುವುದು. ಇದರಿಂದ ಹೊರಡುವಾಗ ಸುಲಭವಾಗಿ, ಬೇಗ ನಮ್ಮ ಚಪ್ಪಲಿ ನಾವು ಹಾಕಿಕೊಳ್ಳಬಹುದು.
2) ಕಾರ್ಯಕ್ರಮದ ಅಂಗಳದಲ್ಲಿ ಹಾಕಿರುವ ಆಸನಗಳನ್ನು ಬದಲಾಯಿಸದೇ ಹಾಕಿರುವ ಜಾಗದಲ್ಲೇ ಕುಳಿತುಕೊಳ್ಳುವುದು. ಇದರಿಂದ ಮಧ್ಯೆ ಸಾಲಿನಲ್ಲಿ ಓಡಾಡುವವರಿಗೆ ತೊಂದರೆ ಯಾಗುವುದಿಲ್ಲ.
3) ಕಾರ್ಯಕ್ರಮ ನಡೆಯುತ್ತಿರುವಾಗ ಸದ್ದು, ಗದ್ದಲ, ಮಾತು, ಗಲಾಟೆ ಕಡಿಮೆ ಮಾಡುವುದು. ಇದರಿಂದ ಆಸಕ್ತರಿಗೆ ಕಾರ್ಯಕ್ರಮ ಆಲಿಸುವುದು, ಭಾಗವಹಿಸುವುದು ಸುಲಭ ವಾಗುತ್ತದೆ.
4) ಕಾರ್ಯಕ್ರಮದ ಕೊನೆಯ ಪ್ರಸಾದ ವಿನಿಯೋಗ ಅಥವಾ ಭೋಜನ ಕಾಲಗಳಲ್ಲಿ ಶಿಸ್ತಾಗಿ, ಸಾಲಾಗಿ, ನಿಧಾನವಾಗಿ ಇದ್ದರೆ ಎಲ್ಲರಿಗೂ ಸಕಾಲದಲ್ಲಿ ಅವಕಾಶ ಸಿಕ್ಕೇ ಸಿಗುತ್ತದೆ.
5) ಕಾರ್ಯಕ್ರಮ ನಡೆಸುವವರನ್ನು ಆಕ್ಷೇಪಣೆ ಮಾಡುವುದಕ್ಕಿಂತ ಏನಾದರೂ ಸರಿ ಮಾಡಬೇಕಿದ್ದಲ್ಲಿ ಅದನ್ನು ಸಂಬಂಧಪಟ್ಟವರಿಗೆ ತಿಳಿಸಿ ಅದನ್ನು ಮತ್ತೂ ಚೆನ್ನಾಗಿ ಮಾಡುವ ಸಲಹೆ ಕೊಡುವುದರೊಂದಿಗೆ, ಅವರೊಂದಿಗೆ ನಾವೂ ಭಾಗವಹಿಸುವು ದರಿಂದ ಆ ಕಾರ್ಯಕ್ರಮ ಇನ್ನೂ ಕಳೆ ಕಟ್ಟುತ್ತದೆ.
6) ಕಡೆಯದಾದರೂ ಮುಖ್ಯವಾದದ್ದು, ಕಾರ್ಯಕ್ರಮಕ್ಕೆ ಸರಿಯಾದ ಸಮಯಕ್ಕೆ ಹಾಜರಿರುವುದು. ವಿದೇಶೀಯರಿಂದ ನಾವು ಕಲಿಯಬೇಕಾದ ಮುಖ್ಯಪಾಠ ಶಿಸ್ತು, ಕರ್ತವ್ಯ, ಸಮಯಪಾಲನೆ, ವೇಷಭೂಷಣಗಳನ್ನಲ್ಲ.



■ ಆರ್. ರಮೇಶ್
99451 99637

### ನಗೆಹನಿ

**ಟೀಚರ್ :** 'ನಾನು ರಾತ್ರಿ, ಮರ ಹತ್ತಿ ಹಣ್ಣು ಕೀಳಲು ಮನೆಯ ಹಿಂದುಗಡೆ ಹೋಗಿದ್ದೆ' ಈ ವಾಕ್ಯವನ್ನು ಇಂಗ್ಲಿಷ್‌ನಲ್ಲಿ ಹೇಳೀ

**ವಿದ್ಯಾರ್ಥಿ:** I went to ಹಿತ್ತಲು, in the ಕತ್ತಲು, tree ಹತ್ತಲು, fruit ಕಿತ್ತಲು.

■ ಹೆಚ್.ಪಿ. ರಾಮಕೃಷ್ಣ



## ಚಿಣ್ಣರ ಪುಟ

# ಅರ್ಧ ವಿದ್ಯೆಯಿಂದ ಆಪತ್ತು

ಗೋವಿಂದ, ಕೃಷ್ಣ ಇಬ್ಬರೂ ಒಂದೇ ಊರಿನವರು. ಇಬ್ಬರೂ ಒಬ್ಬರೇ ಗುರುಗಳ ಹತ್ತಿರ ವಿದ್ಯೆ ಕಲಿಯಲು ಗುರುಕುಲಕ್ಕೆ ಹೊರಟರು. ಗೋವಿಂದ ಬಹಳ ಶಾಂತ ಸ್ವಭಾವದವನು. ಇವನಿಗೆ ವಿದ್ಯೆ ಕಲಿಯುವುದರಲ್ಲಿ ತುಂಬಾ ಆಸಕ್ತಿ ಇತ್ತು. ಕೃಷ್ಣನಾದರೋ ಬಹಳ ದುಷ್ಟ. ಇವನಿಗೆ ವಿದ್ಯೆಯಲ್ಲಿ ಆಸಕ್ತಿಯೂ ಇರಲಿಲ್ಲ. ಗುರುಗಳಲ್ಲಿ ಭಕ್ತಿಯೂ ಇರಲಿಲ್ಲ.

ಇಬ್ಬರೂ ವಿದ್ಯಾಭ್ಯಾಸ ಮುಗಿಸಿ ಊರಿಗೆ ಬರುತ್ತಿದ್ದರು. ದಾರಿಯಲ್ಲಿ ಒಂದು ಕರುವನ್ನು ನೋಡಿದರು. ಆಗ ಕೃಷ್ಣ ಹೇಳಿದ, "ನೋಡೋ ಗೋವಿಂದ ನಮಗೆ ಗುರುಗಳು ಯಾವ ಪ್ರಾಣಿಯನ್ನಾದರೂ ಬದಲಾಯಿಸುವ ವಿದ್ಯೆ ಹೇಳಿಕೊಟ್ಟಿದ್ದಾರಲ್ಲ. ಈಗ ನಾನು ಈ ಕರುವನ್ನು ಒಂದು ಹುಲಿಯನ್ನಾಗಿ ಮಾಡುತ್ತೇನೆ ನೋಡ್ರು" ಎಂದ.

ಆಗ ಗೋವಿಂದ "ಕೃಷ್ಣ ನೀನು ಕರುವನ್ನು ಹುಲಿಯನ್ನಾಗಿ ಮಾಡುತ್ತೀ ಸರಿ ಆದರೆ ನಿನಗೆ ಹುಲಿಯನ್ನು ಕರುವನ್ನಾಗಿ ಮಾಡುವ ವಿದ್ಯೆ ಗೊತ್ತಿಲ್ಲ. "ನೀನು ಹುಲಿಯನ್ನು ಮಾಡಬೇಡ" ಎಂದು ಹೇಳಿದ.

ಆಗ ಕೃಷ್ಣನಿಗೆ ಬಹಳ ಕೋಪ ಬಂತು.

"ಹೋಗೋ, ಹೋಗೋ ನನಗೆ ಇಷ್ಟ ಬಂದ ಹಾಗೆ ನಾನು ಮಾಡುತ್ತೇನೆ. ನೀನ್ಯಾರು ಕೇಳುವುದಕ್ಕೆ" ಎಂದ.

ಕೃಷ್ಣನಿಗೆ ಪ್ರಾಣಿಯನ್ನು ಬದಲಾಯಿಸುವುದಕ್ಕೆ ಗೊತ್ತಿತ್ತೇ ಹೊರತು ಅದನ್ನು ಉಪಶಮನ ಮಾಡುವ ವಿದ್ಯೆ ಗೊತ್ತಿರಲಿಲ್ಲ. ಆದರೆ ಗೋವಿಂದನಿಗೆ ಎರಡೂ ಗೊತ್ತಿತ್ತು.

ಕೃಷ್ಣ ಕೂಡಲೆ ಒಂದು ಕರುವನ್ನು ಹುಲಿಯನ್ನಾಗಿ ಮಾಡಿಯೇಬಿಟ್ಟ. ಗೋವಿಂದನು ಉಪಶಮನದ ಮಂತ್ರವನ್ನು ಹೇಳುವಷ್ಟರಲ್ಲಿಯೇ ಹುಲಿ ಎಗರಿ ಬಂದು ಕೃಷ್ಣನ ಮೇಲೆ ಹಾರಿಯೇಬಿಟ್ಟಿತು. ಕೃಷ್ಣನು ಹೆದರಿಕೆಯಿಂದ ಪ್ರಾಣವನ್ನೇ ಬಿಟ್ಟನು. ಗೋವಿಂದನು ಉಪಶಮನ ಮಂತ್ರವನ್ನು ತಕ್ಷಣ ಹೇಳಿ ಹುಲಿಯನ್ನು ಕರುವನ್ನಾಗಿಸಿದನು.

ನೀತಿ: ಆದ್ದರಿಂದ ಯಾವತ್ತೂ ಯಾವುದಾದರೂ ವಿದ್ಯೆ ಕಲಿತರೆ ಪೂರ್ತಿ ಕಲಿಯಬೇಕು. ಅರ್ಧ ವಿದ್ಯೆಯಿಂದ ಬಹಳ ಆಪತ್ತು.

1) ಅಲ್ಪ ವಿದ್ಯೆ ಕಲಿತವನು ಮಹಾಗರ್ವಿ

2) ತುಂಬಿದ ಕೊಡ ತುಳುಕುವುದಿಲ್ಲ.

■ ಛಾಯಾ ಭಗವಾನ್

## ಪೆನ್ಸಿಲ್ ರೇಖಾಚಿತ್ರಗಳು



ಚಿತ್ರ ರಚನೆ: ■ ಆತ್ರೇಯ





ಚಿತ್ರ ರಚನೆ: ■ ಉಜ್ವಲ್



## ಐದು ವ್ಯತ್ಯಾಸ ಕಂಡು ಹಿಡಿಯಿರಿ

■ ಗೋವಿಂದರಾವ್ ಡಿ.



## ಇಂದಿನ ವಿಶ್ವದ ವಿಚಿತ್ರಗಳು

ನಾವಿರುವ ವಿಶ್ವ ಅರ್ಥವಾಗದಷ್ಟು ವಿಚಿತ್ರವಾಗಿದೆಯೆಂದು ನಮಗೆ ಅನೇಕ ಸಂದರ್ಭಗಳಲ್ಲಿ ಅನಿಸಿರಬಹುದು. ಅದು ಅಸಹಜವೇನಲ್ಲ. ಅಂತಹ ವಿಚಿತ್ರಗಳ ಪುಟ್ಟ ಪಟ್ಟಿ ಇಲ್ಲಿದೆ. ಇದಕ್ಕೆ ಸ್ಫೂರ್ತಿ ಜಾರ್ಜ್ ಕಾರ್ಲಿನ್ ಎಂಬ ಮಹನೀಯರು. ಇದನ್ನು ಓದಿ ನೋಡೋಣ.

- ನಮ್ಮಲ್ಲಿ ಎತ್ತರದಿಂದ ಕಟ್ಟಡಗಳಿವೆ, ಆದರೆ ಸ್ಫೋಟಿಸುವ ಸ್ವಭಾವಗಳು ಇದೆ.
- ರಸ್ತೆಗಳು ವಿಶಾಲವಾಗಿವೆ. ಆದರೆ ದೃಷ್ಟಿ ಕೋನಗಳು ಸಂಕುಚಿತವಾಗಿ
- ನಾವು ಹೆಚ್ಚು ಖರೀದಿಸುತ್ತೇವೆ, ಆದರೆ ಕಡಿಮೆ ಉಪಯೋಗಿಸುತ್ತೇವೆ.
- ನಮ್ಮ ಮನೆಗಳು ದೊಡ್ಡದಾಗುತ್ತಿವೆ. ಆದರೆ ಕುಟುಂಬ ಚಿಕ್ಕದಾಗುತ್ತಿವೆ.
- ಅನುಕೂಲಗಳು ಹೆಚ್ಚಿವೆ ಆದರೆ ಅನುಭವಿಸಲು ಸಮಯವೇ ಇಲ್ಲ!
- ಅಸಾಮಾನ್ಯ ವಿದ್ಯಾರ್ಹತೆಗಳಿವೆ. ಆದರೆ ಸಾಮಾನ್ಯಜ್ಞಾನ ಕಡಿಮೆಯಾಗಿದೆ!
- ವಿಷಯ ಸಂಗ್ರಹ ಹೆಚ್ಚಾಗಿದೆ, ಆದರೆ ವಿವೇಚನೆ ಕಡಿಮೆಯಾಗಿದೆ!
- ಪರಿಣಿತರು ಹೆಚ್ಚಿದ್ದಾರೆ, ಸಮಸ್ಯೆಗಳು ಹೆಚ್ಚಿವೆ!
- ಔಷಧಿಗಳು ಹೆಚ್ಚಿವೆ. ಆರೋಗ್ಯ ಕಡಿಮೆಯಾಗಿದೆ!
- ನಾವು ಹೆಚ್ಚು ಗಳಿಸುತ್ತೇವೆ. ಆದರೆ ಕಡಿಮೆ ನಗುತೇವೆ!
- ತುಂಬ ವೇಗವಾಗಿ ಹೋಗುತ್ತೇವೆ, ತುಂಬ ಬೇಗ ಕೋಪಿಸಿಕೊಳ್ಳುತ್ತೇನೆ.
- ರಾತ್ರಿ ತುಂಬಾ ಹೊತ್ತು ಎದ್ದಿರುತ್ತೇವೆ. ಬೆಳಿಗ್ಗೆ ತುಂಬ ಬಳಲಿಕೆಯಿಂದ ಏಳುತ್ತೇವೆ!
- ಕಡಿಮೆ ಓದುತ್ತೇವೆ. ತುಂಬ ಟೀವಿ ನೋಡುತ್ತೇವೆ ಮತ್ತು ಅಪರೂಪಕ್ಕೆ ಪ್ರಾರ್ಥಿಸುತ್ತೇವೆ!
- ನಮ್ಮ ಆಸ್ತಿ–ಪಾಸ್ತಿಯ ಬೆಲೆ ಏರಿದೆ. ಆದರೆ ನಮ್ಮ ಮೌಲ್ಯಗಳು ಇಳಿದಿವೆ.
- ತುಂಬ ಹೆಚ್ಚು ಮಾತನಾಡುತ್ತೇವೆ, ತುಂಬಾ ಕಡಿಮೆ ಪ್ರೀತಿಸುತ್ತೇವೆ ಮತ್ತು ತುಂಬಾ ಸುಳ್ಳು ಹೇಳುತ್ತೇವೆ!
- ಜೀವನೋಪಾಯ ಮಾರ್ಗ ಅರಿತಿದ್ದೇವೆ. ಆದರೆ ಜೀವಿಸುವುದು ಹೇಗೆಂಬುದನ್ನು ಮರೆತ್ತಿದ್ದೇವೆ.
- ನಮ್ಮ ಜೀವನಕ್ಕೆ ವರ್ಷಗಳನ್ನು ತುಂಬುತ್ತಿದ್ದೇವೆ. ಆದರೆ ವರ್ಷಗಳಿಗೆ ಜೀವ ತುಂಬುತ್ತಿಲ್ಲ!
- ನಾವು ಚಂದ್ರಲೋಕವನ್ನು ಮುಟ್ಟಿ ಬಂದಿದ್ದೇವೆ, ಆದರೆ ನಮ್ಮ ಕಾಂಪೌಂಡು ದಾಟಿ ನೆರೆಯವನನ್ನು ಭೇಟಿಯಾಗುತ್ತಿಲ್ಲ.
- ನಾವು ಬಹಿರಂಗದಲ್ಲಿ ಗೆಲ್ಲುತ್ತಿದ್ದೇವೆ ಆದರೆ ಅಂತರಂಗದಲ್ಲಿ ಸೋಲುತ್ತಿದ್ದೇವೆ.
- ಗಾಳಿಯನ್ನು ಶುದ್ಧೀಕರಿಸಿದ್ದೇವೆ, ಆದರೆ ನಮ್ಮ ಆತ್ಮವನ್ನು ಮಲಿನಗೊಳಿಸಿದ್ದೇನೆ.
- ಅಣುವನ್ನು ಖಂಡ–ತುಂಡುಮಾಡಿದ್ದೇವೆ, ಆದರೆ ನಮ್ಮ ಅಹಂ ಅಖಂಡವಾಗಿ ಉಳಿದಿದೆ!
- ಬರವಣಿಗೆ ಹೆಚ್ಚಾಗಿದೆ, ಆದರೆ ಅರಿವು ಕಡಿಮೆಯಾಗಿದೆ!
- ಹೆಚ್ಚು ಯೋಚಿಸುತ್ತೇವೆ. ಆದರೆ ಕಡಿಮೆ ಸಾಧಿಸುತ್ತೇವೆ!
- ಧಾವಂತ ಪಡುವುದನ್ನು ಕಲಿತಿದ್ದೇವೆ. ಆದರೆ ನಿಧಾನವನ್ನು ಮರೆತಿದ್ದೇವೆ!
- ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದೆ. ಆದರೆ ನೈತಿಕತೆ ಕುಸಿದಿದೆ!
- ಇದು ವಿವಿಧ ಭಕ್ಷಗಳ ಕಾಲ, ಆದರೆ ಕಡಿಮೆ ಜೀರ್ಣಶಕ್ತಿಯ ಕಾಲ!
- ಎತ್ತರದ ಆಕಾರ, ಆದರೆ ಕುಬ್ಜ ವ್ಯಕ್ತಿತ್ವದ ಮನುಷ್ಯರ ಕಾಲ!
- ಒಳ್ಳೆ ಲಾಭ ಸಂಪಾದನೆ, ಆದರೆ ಟೊಳ್ಳು ಸಂಬಂಧಗಳ ಕಾಲ!
- ವಿಶ್ವಶಾಂತಿಯ ಬಗ್ಗೆ ಮಾತನಾಡುತ್ತೇವೆ, ಆದರೆ ಮನೆಯವರೊಂದಿಗೆ ಕಾದಾಡುತ್ತೇವೆ!
- ಹೆಚ್ಚು ವಿರಾಮವಿದೆ, ಆದರೆ ಕಡಿಮೆ ಆರಾಮವಿದೆ!
- ಗಂಡ–ಹೆಂಡಿರ ದುಡಿಮೆ ಹೆಚ್ಚಾಗಿದೆ, ಆದರೆ ವಿಚ್ಛೇದನಗಳು ಹೆಚ್ಚಾಗಿದೆ!
- ಅದ್ಭುತ ವಿನ್ಯಾಸದ ನಿವಾಸಗಳಿವೆ, ಆದರೆ ವಾಸಸ್ಥಾನವೇ ಮುರಿದು ಬಿದ್ದಿದೆ!
- ಹಸಿವು ಹೆಚ್ಚಿಸಲು–ಹಸಿವು ತಗ್ಗಿಸಲು ಜೀರ್ಣಿಸಿಕೊಳ್ಳಲು ಮಾತ್ರೆಗಳಿವೆ, ದಾಪ್ಪಗಾಗಲು, ಸಣ್ಣಗಾಗಲು, ತೆಪ್ಪಗಿರಲು, ಕುಪ್ಪಳಿಸುತ್ತಿರಲು ಮಾತ್ರೆಗಳಿವೆ.
- ನಿದ್ದೆಗೂ–ನಿದ್ದೆ ಗೆಡುವುದಕ್ಕೂ ಬದುಕುವುದಕ್ಕೂ ಕೊನೆಗೆ ಸಾಯುವದಕ್ಕೂ ಮಾತ್ರೆಗಳೇ ಬೇಕು.

ಮೇಲಿನ ಸಂಗತಿಗಳು ಪರದೇಶಗಳಿಗೆ ಮಾತ್ರ ಅನ್ವಯಿಸುತ್ತವೆಯೋ, ನಮ್ಮ ದೇಶಕ್ಕೂ ಅನ್ವಯಿಸುತ್ತವೆಯೋ? ಯೋಚಿಸಿ ನೋಡೋಣ? ಗೆಳೆಯರಿದ್ದರೆ ಹಂಚಿಕೊಳ್ಳೋಣ!



■ ಎಸ್. ಶ್ರೀನಿವಾಸಯ್ಯ

## ನಮ್ಮ ಹಿರಿಯರು: ಒಂದು ನೆನಪು

"ವೇಗದ ಕಾಲದಲ್ಲಿ ಮೌಲ್ಯ ಆಧಾರಿತಬದುಕು ಶಿಥಿಲವಾಗುತ್ತಿದೆಯೇ?"

ಬೃಹಚ್ಚರಣ ಸಮಾಜವು ಬೃಹತ್ ಗಾತ್ರವಾಗಿ ಬೆಳೆಯುತ್ತಿರುವುದು ಜ್ಞಾನಾರ್ಜನೆಯ ಅಂಬರದಷ್ಟೆ ಚೇತನ ಎಂದು ಹೇಳಬಹುದು. ನನ್ನ ತಾತಂದಿರಾದ ಡಾ. ರಾಮಸ್ವಾಮಿ ಅಯ್ಯರ್ ಮೂಲತಃ ಸೇಲಂ, ಮತ್ತು ಡಾ. ಸುಬ್ರಾಮಯ್ಯನವರು ಮೂಲತಃ ಹೊಸೂರು, ಈಗಿನ ತಮಿಳುನಾಡಿನ ಪ್ರಾಂತ್ಯದಲ್ಲಿರುತ್ತದೆ. ಇವರುಗಳ ನಡೆ, ನುಡಿ, ಶಿಸ್ತುಜ್ಞಾನ, ಸಂಸ್ಕಾರ, ಇಂದಿಗೂ ಶ್ರೇಯಸ್ಕರ ನಾನು ಚಿಕ್ಕವನಾಗಿದ್ದಾಗ ನನ್ನ ತಾತನವರು ಶ್ರೀಶಂಕರರ ಬ್ರಹ್ಮ ಭಾವ, ಗೀತಾಯಜ್ಞವನ್ನು ಪಠಿಸುತ್ತಿದ್ದ ಕಾಲ ನೆನಪಿಸುತ್ತದೆ. ಯಜ್ಞ ಎಂದರೆ "ಯಜ್ಞೋ ವೈ ವಿಷ್ಣುಃ ಎಂದಂತೆ ಈಶ್ವರನ ಸಂಕೇತ.

ಸುಮಾರು 55 ವರ್ಷಗಳ ಹಿಂದೆ ನನ್ನ ತಾತಂದಿರು ನಮ್ಮ ಸಮಾಜದ ಪ್ರತಿಭಾವಂತರನ್ನು ಪರಿಚಯಿಸಿದ ನೆನಪು. ಅದರಲ್ಲಿ ಡಾ. ಗೋಪಾಲಸ್ವಾಮಿ, ಕೃಷ್ಣಸ್ವಾಮಿ (ಡಿ.ವಿ.ಜಿ.ಯವರ ಅಳಿಯಂದಿರು) ಅರೇಹಳ್ಳಿ ಮುನೀಶ್ವರಯ್ಯನವರು, ಬಿದರಗೆರೆ ನಾಗರಾಜ್‌ರವರು, ಹಲಸೂರ ಶ್ರೀ ಕಂಠಯ್ಯನವರು, ಥಳಿ ಮೂಲದವರಾದ ಶ್ರೀಕಂಠೇಶ್ವರ ಅಯ್ಯರ್, ಡಾ. ದಾನಪ್ಪನವರು ಇತ್ಯಾದಿ. ನಮ್ಮ ಜನಾಂಗದಲ್ಲಿ ಪ್ರಮುಖವಾಗಿ ಮಕ್ಕಳನ್ನು ವೈದ್ಯರಾಗಿಯೋ ಅಥವಾ ಇಂಜಿನಿಯರ್ ವೃತ್ತಿಗೆ ಪುರಸ್ಕರಿಸುವ ಪ್ರತೀತಿ, ಇಂದಿಗೂ ಈ ಸಂಸ್ಕೃತಿ ಬೆಳೆದಿರುತ್ತದೆ. ನನ್ನ ತಾಯಿಯವರ ತಾತ ಕಾಚರಕನಹಳ್ಳಿ ಶ್ರೀಯುತ ಲಕ್ಷ್ಮೀನಾರಾಯಣಪ್ಪನವರ ಶಿಸ್ತು ಮತ್ತು ತ್ರಿಕಾಲ ಪೂಜೆಯ ವಿವರ ಒಂದು ದೈವಿಕ ಅಂಶ. ಅಂದಿನ ಶಿಸ್ತು ಮತ್ತು ಮೌಲ್ಯ ಆಧಾರಿತ ತಳಹದಿ ಹಂತ ಹಂತವಾಗಿ ಶಿಥಿಲಗೊಳ್ಳುತ್ತಿದ್ದು ಸಂಬಂಧಗಳನ್ನೇ ಮರೆಸುತ್ತಿದೆ. ಈ ವೇಗದ ಕಾಲ ವಿಮರ್ಶಿಸಿಕೊಂಡರೆ ಆಪ್ಯಾಯಮಾನದ ಸವಿನೆನಪುಗಳ ರೇಖೆ ಬಿಂಬಿಸುವುದು ಸ್ಪಷ್ಟ.

■ ಸೇಲಂ. ವಿ. ಸುಬ್ರಮಣ್ಯಂ, 9845334589



# ದರ್ಪಣ ಸುಂದರಿ

ಓ ದರ್ಪಣ ಸುಂದರ ಬಾಲಿಕೆ
ನಿನ್ನ ಕಾಣುವುದೆನ್ನ ಕೋರಿಕೆ
ಆ ನಿನ್ನ ಮೊಗದ ಮುಗುಳ್ನಗು
ಆಯಿತೆನಗೆ ಮರೀಚಿಕೆ ||
ನಿನ್ನ ಆ ಸುಂದರ ಕಣ್ಣುಗಳೇ
ನನಗೆ ದೀಪಿಕೆ ||

ನೀ ಹಿಡಿದಿರುವ ದೀಪಗಳ ಮಾಲಿಕೆ
ಸೂಚಿಸುವುದು ನಿನ್ನ ಮನದ ಕೋರಿಕೆ
ನಿನ್ನ ಮನೆ, ಮನ ಬೆಳಗಲೆಂಬುದು
ನನ್ನ ಹಾರೈಕೆ ||
ದೇವರಲ್ಲಿ ನಾ ಬೇಡುವುದು ಈ ಅರಿಕೆ ||

ಓ ಬಾಲಿಕೆ, ನಿನಗೆ ನೀನೇ ಸಾಟಿ
ಎಂಬುದೆನ್ನ ನಂಬಿಕೆ
ನಿನ್ನ ಸಾತ್ವಿಕ ರೂಪ
ನನಗೆ ನೆನಪಿಸುವುದು ಆ ಅಂಬಿಕೆ ||
ಯಾವಾಗಲೂ ನಿನ್ನಲ್ಲಿರಲಿ ಮಂದಹಾಸದ
ಮುಖ ಮುದ್ರಿಕೆ ||

ಓ ದೀಪ ಬಾಲಿಕೆ
ನಿನ್ನ ಬಾಳು ಯಾವಾಗಲೂ ಬೆಳಗಲಿ
ಎಂದೂ ಈ ಮುಗುಳ್ನಗೆ ಮಾಸದಿರಲಿ
ನಿನ್ನ ದೀಪ ಎಂದೂ ಆರದಿರಲಿ ||
ಅದು ಜ್ಞಾನ ವಿದ್ಯೆ ಸೌಂದರ್ಯಗಳ
ಸಮ್ಮಿಲನವಾಗಲಿ ||

■ ಕೆ.ಆರ್. ನಾಗರತ್ನ



**ಶ್ರದ್ಧಾಂಜಲಿ**

ನಮ್ಮನ್ನಗಲಿದ ನಮ್ಮವರು
**ಕಿತ್ತಿಗಾನಹಳ್ಳಿ ಪಟ್ಟಾಭಿರಾಮನ್** (92)
ಸಂಘದ ಹಿರಿಯ, ಸಕ್ರಿಯ ಸದಸ್ಯರಾಗಿದ್ದರು.

# ಮೊರೆಯನು ಆಲಿಸು ಗುರುದೇವ



ಸ್ವಾಮಿ ಸಮರ್ಥ ರಾಮದಾಸ್

ನಿನ್ನಡಿಗೆರಗುತ ಅನುದಿನ ಬೇಡುವೆ
ಆಲಿಸು ಮೊರೆಯನು ಗುರುದೇವ ।
ನಿನ್ನಯ ನೆನಪಲಿ ಕಳೆವೆನು ದಿನಗಳ
ಕರುಣೆಯ ತೋರೋ ಗುರುದೇವ ||1||

ಅರಿಷಡ್ವರ್ಗದ ಅರಿಗಳು ಚಿತ್ತವ
ಕಲಕಿದೆ ಬಿಡದೆಲೆ ಗುರುದೇವ ।
ಅರಿಗಳನಳಿಸುತ ಕದಡಿದ ಮನದಲಿ
ಶಾಂತಿಯನರಳಿಸು ಗುರುದೇವ ||2||

ಕತ್ತಲ ಕೂಪದಿ ಬೆಳಕನು ಕಾಣದೆ
ತಡವರಿಸಿರುವೆನು ಗುರುದೇವ ।
ಮುತ್ತಿದ ಕತ್ತಲ ನಿನ್ನನುಗ್ರಹದಲಿ
ತೊಲಗಿಸಿ ಕಾವುದು ಗುರುದೇವ ||3||

ಶ್ರೀರಘುರಾಮನ ನಾಮದ ಮಹಿಮೆಯ
ದಾರಿಯ ತೋರಿದೆ ಗುರುದೇವ ।
ತೋರಿದ ಮಾರ್ಗದಿ ಸಾಗದೆ ಬಳಲಿದೆ
ಮೌಢ್ಯವ ಹರಿಸೋ ಗುರುದೇವ ||4||

ಪಾಪದ ಭಾರದ ಹೊರೆಯನು ತಾಳದೆ
ಕುಸಿದಿದೆ ಈ ತನುಗುರುದೇವ ।
ಈ ಪರಿತಾಪದ ಬೇಗೆಯ ನೀಗಿಸಿ
ನಿರ್ಮಲವಾಗಿಸು ಗುರುದೇವ ||5||

ವ್ಯರ್ಥದಿ ಕಳೆದೆನು ಕಾಲವ ಮದದಲಿ
ನಾಮವ ನುಡಿಯದೆ ಗುರುದೇವ ।
ಸ್ವಾರ್ಥ ಪರಿಧಿಯಲಿ ಪರಿಭ್ರಮಿಸುತಿರುವೆ
ಸಹಿಸೆನು ಸಂಕಟ ಗುರುದೇವ ||6||

ಶ್ರೀ ಕವಿ ಕಿಂಕರ ಭಕ್ತನ ತೆರದಲಿ
ಸ್ತುತಿಸಲು ಬಾರದು ಗುರದೇವ
ಲೋಕ ಪಾಲಕನ ಪೂರ್ಣಾನುಗ್ರಹ
ನೆರೆದಯಪಾಲಿಸು ಗುರುದೇವ ||7||

ಇನ್ನಾದರು ಸರಿ ಕಂದನ ಬಿನ್ನಪ
ಕೇಳುತ ರಕ್ಷಿಸು ಗುರುದೇವ ।
ನಿನ್ನನು ಬಿಟ್ಟರೆ ಗತಿಯಾರೆನಗೆ?
ನೀನೆನಗೆಲ್ಲವು ಗುರುದೇವ ||8||



■ ವೈ.ಜಿ. ಗಿರಿಶಾಸ್ತ್ರೀ

## ಒದುಗರ ಪತ್ರಗಳು



**"ಬೃಹತ್‌ಚ್ಚರಣ"** ತ್ರೈಮಾಸಿಕದ ಬಗೆಗೆ ಒಂದು ಅನಿಸಿಕೆ.

ನಾಲ್ಕು ಸಂಪುಟದ ಎಲ್ಲಾ ಪ್ರತಿಗಳನ್ನು ಕಂಡಿರುವ ನಾನು ಹೆಜ್ಜೆಗಳನ್ನು ಗಮನಿಸಿದ್ದೇನೆ. ಅಂಬೆಗಾಲಿನಿಂದ ನಡೆದಾಡುವ ಸ್ಥಿತಿಯಲ್ಲಿರುವ ಇದು ನಾಗಾಲೋಟದ ದಾಪುಗಾಲಿನ striclesಗೆ ಚಲಿಸಬೇಕಾದ ಅನಿವಾರ್ಯತೆ ಇದಕ್ಕೆ ಇದೆ.

ಸಮಾಚಾರಗಳು, ಬೃಹತ್‌ಚರಣದ ಹಿಂದಿನ ನೆನಪುಗಳು, ನಮ್ಮ ಭಾಷೆಯಲ್ಲಿ ಬರುತ್ತಿದ್ದ ಮಂಕುತಿಮ್ಮನಿಗೆ, ಇಂದಿನವರಿಗೆ ತಿಳಿಯುವಂತೆ ಕನ್ನಡದ ಪದ್ಯಗಳು ಅಕ್ಕಪಕ್ಕದಲ್ಲಿದ್ದರೆ ಇನ್ನೂ ಸಮಂಜಸವಾಗುತ್ತಿತ್ತೇನೋ ಎನ್ನುವ ಭಾವನೆ ನನಗೆ.

ಸಮುದಾಯದ ಇಂದಿನ ಯುವಕರ ಚಟುವಟಿಕೆಗಳು ಅವರು ಅಭ್ಯುದಯ ಸಾಧನೆಗಳ ಅಂಕಿ–ಅಂಶ ಇನ್ನೂ ಹೆಚ್ಚಲಿ ಹಳೆಯ ಬೇರಿನಲ್ಲಿ ಹೊಸ ಚಿಗುರು ಮೂಡುವುದು ಸಹಜ. ಇದರಿಂದ ಸಮಾಜ, ಸಮುದಾಯ ವಿಕಾಸ.

ಬೃಹತ್‌ಚರಣದಲ್ಲಿನ ಲೇಖನ, ವಿಚಾರಗಳು, ಸುದ್ದಿಗಳನ್ನು ಅಳವಡಿಸು ವಾಗ ಪತ್ರಿಕಾವಿನ್ಯಾಸದಲ್ಲಿ ಬದಲಾವಣೆ ತರುವುದು ಸೂಕ್ತ. ನೆನಪಿನಾಳದ ಛಾಯಚಿತ್ರಗಳು ಇನ್ನಷ್ಟು ಹೆಚ್ಚಲಿ. ಅದರಿಂದ ಹಿಂದಿನ ತಲೆಮಾರಿನ ಪರಿಚಯ ಇಂದಿನವರಿಗೆ ಆಗುತ್ತದೆ.

ಲೇಖಕರ ದೂರವಾಣಿ ಸಂಖ್ಯೆಯನ್ನು ಸಮುದಾಯಕ್ಕೆ ನೀಡಿದರೆ ಸಂಪರ್ಕಕ್ಕೆ ಅನುಕೂಲ ಹೆಚ್ಚುತ್ತದೆ. ಲೇಖನ ಎಂದಿಗೂ ಚಿಕ್ಕದು ಹಾಗೂ ಚೊಕ್ಕದಾಗಿದ್ದರೆ ಚೆನ್ನ. ಇದರಿಂದ ಪತ್ರಿಕೆಯಲ್ಲಿ ಹೆಚ್ಚು ಜನರಿಗೆ ಅವಕಾಶ. ಸಂಗ್ರಹ, ಟಿಪ್ಪಣಿ, ವಿಚಾರಗಳ ಪುನಃ ಮುದ್ರಣಗಳು ಕ್ರಮೇಣ ಕಡಿಮೆಯಾಗಲಿ. ಸ್ವತಂತ್ರ ಬರೆಹಗಳಿಗೆ ಪ್ರಾಶಸ್ತ್ಯ ಸಿಗಲೆಂಬುದೇ ನನ್ನ ಅಭಿಮತ.

ಪತ್ರಿಕೆಯ ಸುರಸುಂದರತೆ ಹೆಚ್ಚಲಿ ಶ್ರೀರಸ್ತು–ಶುಭಮಸ್ತು.

03–06–2014
ಬೆಂಗಳೂರು–76

■ **ಜಿ.ಎಸ್. ಸತ್ಯಮೂರ್ತಿ**

★ ★

ಸಂಘದ ಅಧ್ಯಕ್ಷರಿಗೆ,

13–7–2014ರಂದು ನಡೆದ ವಾರ್ಷಿಕ ಸಭೆಗೆ ಬಂದವರಲ್ಲಿ ನಾನೂ ಒಬ್ಬ. ಸಭೆ ಅತ್ಯಂತ ಅರ್ಥ ಗರ್ಭಿತವಾಗಿ ನಡೆದು ಎಲ್ಲರಿಗೂ ಸಂತೋಷ ನೀಡಿತು. ಕಾರ್ಯದರ್ಶಿ ಶ್ರೀ ಮಣಿಯವರು ಸಂಘದ ಕಾರ್ಯಚಟುವಟಿಕೆಗಳನ್ನು ವಿವರಿಸಿದ್ದು, ತಮ್ಮ ಅಧ್ಯಕ್ಷೀಯ ಭಾಷಣವು ಮನ ಮುಟ್ಟುವಂತಿತ್ತು. **'ವಿದ್ಯಾ ಪ್ರೋತ್ಸಾಹ ನಿಧಿಗೆ'** ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ ಹಾಗೆಯೇ ವಾರ್ಷಿಕ ಸಂಘದ ವೆಚ್ಚಕ್ಕಾಗಿ 250/– ರೂ.ಗಳನ್ನು ಸಂತೋಷದಿಂದ ಕೊಡುತ್ತೇನೆ. ಪ್ರತಿಯೊಬ್ಬ ಕಾರ್ಯಕಾರಿ ಸಮಿತಿ ಸದಸ್ಯರನ್ನು ಅಭಿನಂದಿಸುತ್ತೇನೆ.

ಬೆಂಗಳೂರು
16–7–2014

ನಿಮ್ಮ ವಿಶ್ವಾಸಿ
■ **ಕೆ.ಎಲ್. ವೇಣುಗೋಪಾಲ್**

## My Feelings.....

It is always nice to know our universe, ourselves and of course our own clan. There is somebody who thinks, who acts and scribbles the thought. This is what happened in 'Bruhacharana' bulletin recently. I had the opportunity to glimpse some issues. It is colourful and has - excellent photographs of our beloved ancestors. We remember them and their contribution in various fields. We had not seen some of them in person. You have given the chance to go back to black & white era. The 'Bruhacharana' indeed has done a great task in finding the 'Rares' in 'Rare groups'. The caption 'Nenapinaladindlli' really touches one's heart with joy. It is simply splendid and nostalgic!

I enjoyed reading the language dictionary. It would be nice to insert some proverbs of our 'desi' language. They delight everyone, Isn't it?

Kudos to the editorial board and the members who are interested in doing their bit to the community.

Long live bruhacharana!!

■ **Jagadapur Subramanyam Indira**
Mysore



Book-Post

To, ______________________

______________________

______________________

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com